# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ | : | 1272 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಸಲೀಂ ಅಹಮದ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08.03.2022 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ಸಚಿವರು. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವತಿಯಿಂದ ವಿಕಲಚೇತನರು ಮತ್ತು ಹಿರಿಯ ನಾಗರಿಕರಿಗೆ ಇರುವ ಯೋಜನೆಗಳು ಯಾವುವು:</td><td>ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖಾ ವತಿಯಿಂದ ವಿಕಲಚೇತನರು ಮತ್ತು ಹಿರಿಯ ನಾಗರಿಕರಿಗೆ ಹಮ್ಮಿಕೊಂಡಿರುವ ಯೋಜನೆಗಳ ವಿವರವನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ.</td></tr>
<tr><td>ಆ</td><td>ಕಳೆದ 3 ವರ್ಷಗಳಿಂದ ಹಾವೇರಿ, ಗದಗ ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಯ ಎಷ್ಟು ಜನರು ಈ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ (ಮಾಹಿತಿ ನೀಡುವುದು)</td><td>ಕಳೆದ 3 ವರ್ಷಗಳಿಂದ ಹಾವೇರಿ, ಗದಗ ಮತ್ತು ಹುಬ್ಬಳ್ಳಿ-ಧಾರವಾಡ ಜಿಲ್ಲೆಗಳಿಗೆ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಯೋಜನೆಗಳಿಂದ ಪ್ರಯೋಜನ ಪಡೆದಿರುವವರ ಮಾಹಿತಿ ಈ ಕೆಳಕಂಡಂತಿದೆ.<br><table><tr><th>ಕ್ರ.ಸಂ</th><th>ಜಿಲ್ಲೆಯ ಹೆಸರು</th><th>2018-19</th><th>2019-20</th><th>2020-21</th></tr><tr><td>1</td><td>ಹಾವೇರಿ</td><td>2222</td><td>2507</td><td>1773</td></tr><tr><td>2</td><td>ಗದಗ</td><td>1772</td><td>1628</td><td>1043</td></tr><tr><td>3</td><td>ಹುಬ್ಬಳ್ಳಿ-ಧಾರವಾಡ</td><td>1329</td><td>3316</td><td>2046</td></tr></table></td></tr>
<tr><td>ಇ</td><td>ವಿಕಲಚೇತನರನ್ನು ನೋಡಿಕೊಳ್ಳಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿರುವ ವಿಶೇಷ ಕೇಂದ್ರಗಳು ಯಾವುವು? (ಮಾಹಿತಿ ನೀಡುವುದು)</td><td>ವಿಕಲಚೇತನರನ್ನು ನೋಡಿಕೊಳ್ಳಲು ಇಲಾಖೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿರುವ ಕೇಂದ್ರಗಳ ವಿವರವನ್ನು ಅನುಬಂಧ-02 ರಲ್ಲಿ ಲಗತ್ತಿಸಿದೆ.</td></tr>
</table>

**ಮಮಇ 67 ಪಿಹೆಚ್‌ಪಿ 2022**

Halappa

(ಆಚಾರ ಹಾಲಪ್ಪ ಬಸಪ್ಪ)
ಮಾನ್ಯ ಗಣಿ ಮತ್ತು ಭೂ ವಿಜ್ಞಾನ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.

## ಅನುಬಂಧ-01

## ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಿಂದ ವಿಕಲಚೇತನರಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು/ಸೇವಾ ಸೌಲಭ್ಯಗಳು

### (ಎ) ಶೈಕ್ಷಣಿಕ ಯೋಜನೆಗಳು:-

**1) ಶ್ರವಣದೋಷವುಳ್ಳ ಮಕ್ಕಳಿಗಾಗಿ ಸರ್ಕಾರದ ವಸತಿಯುತ ಶಾಲೆಗಳು:**

ಶ್ರವಣದೋಷವುಳ್ಳ ಮಕ್ಕಳಿಗಾಗಿ ಮೈಸೂರು, ಕಲಬುರ್ಗಿ, ಬಳ್ಳಾರಿ, ಬೆಳಗಾವಿ ಜಿಲ್ಲೆಗಳಲ್ಲಿ 4 ಕಿವುಡು ಮಕ್ಕಳ ವಸತಿ ಶಾಲೆಗಳನ್ನು ಇಲಾಖಾವತಿಯಿಂದ ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ಮಕ್ಕಳಿಗೆ ಉಚಿತ ವಸತಿ, ಊಟ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪೈಕಿ ಶ್ರವಣದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ಬೆಳಗಾವಿಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ಶ್ರವಣದೋಷವುಳ್ಳ ಮಕ್ಕಳ ವಸತಿ ರಹಿತ ಶಾಲೆಯನ್ನು ಸರ್ಕಾರದ ವಶಕ್ಕೆ ಪಡೆದು ನಡೆಸಲಾಗುತ್ತಿದೆ.

**2. ಅಂಧ ಮಕ್ಕಳಿಗಾಗಿ ಸರ್ಕಾರದ ವಸತಿಯುತ ಶಾಲೆಗಳು:**

ಅಂಧ ಮಕ್ಕಳಿಗಾಗಿ ಕಲಬುರ್ಗಿ, ಮೈಸೂರು, ದಾವಣಗೆರೆ ಹಾಗೂ ಹುಬ್ಬಳ್ಳಿಯಲ್ಲಿ ವಿಶೇಷ ಶಾಲೆಗಳನ್ನು ನಡೆಸಲಾಗುತ್ತಿದೆ. ಈ ಶಾಲೆಗಳಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತ ಊಟ, ವಸತಿ ಮತ್ತು ಶಿಕ್ಷಣವನ್ನು ನೀಡಲಾಗುತ್ತಿದೆ. ಈ ಪೈಕಿ ದೃಷ್ಟಿದೋಷವುಳ್ಳ ಹೆಣ್ಣು ಮಕ್ಕಳಿಗಾಗಿ ದಾವಣಗೆರೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಇರುತ್ತದೆ.

**3. 1982ರ ರಾಜ್ಯ ಅನುದಾನ ಸಂಹಿತೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳು:**

1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ. ವಿವಿಧ ರೀತಿಯ ವಿಕಲಚೇತನರಿಗೆ ವೃತ್ತಿ ತರಬೇತಿಯನ್ನು ನೀಡುತ್ತಿದ್ದು, 04 ವೃತ್ತಿ ತರಬೇತಿ ಕೇಂದ್ರಗಳನ್ನು ರಾಜ್ಯ ಸಹಾಯಾನುದಾನದಡಿ ಬೆಂಗಳೂರಿನಲ್ಲಿ 03 ಮತ್ತು ಮೈಸೂರಿನಲ್ಲಿ 01 ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ 01 ವಾಕ್ ಶ್ರವಣ ಕೇಂದ್ರವನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದೆ. ವೃತ್ತಿ ತರಬೇತಿ ಕೇಂದ್ರಗಳಲ್ಲಿ ವಿವಿಧ ರೀತಿಯ ವಿಕಲಚೇತನರಿಗೆ ಫಿಟ್ಟರ್, ಟರ್ನರ್, ಸರಳ ಇಂಜಿನಿಯರಿಂಗ್, ಬೆತ್ತ, ಹಗ್ಗ, ಚಾಪೆ ಹೆಣೆಯುವುದು ಹಾಗೂ ಪ್ಲಾಸ್ಟಿಕ್ ಮೌಲ್ಡಿಂಗ್ ತರಬೇತಿಯನ್ನು ನೀಡಲಾಗುತ್ತಿದೆ. ಪ್ರತಿ ತರಬೇತಿ ಕೇಂದ್ರದಲ್ಲಿ ವಾರ್ಷಿಕ 25 ಫಲಾನುಭವಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

**4. ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ ನಡೆಯುತ್ತಿರುವ ವಿಶೇಷ ಶಾಲೆಗಳು:**

ಈ ಯೋಜನೆಯಡಿ ಬುದ್ಧಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 141 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

**5. ಕೇಂದ್ರ ಸರ್ಕಾರದಡಿ ವಿಶೇಷ ಶಾಲೆಗಳು:**

ಕೇಂದ್ರ ಸರ್ಕಾರದ ದೀನ್‌ದಯಾಳ್ ಪುನರ್ವಸತಿ ಯೋಜನೆಯಡಿ 02 ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವಿಶೇಷ ಶಾಲೆ /ವೃತ್ತಿ ತರಬೇತಿ ಕೇಂದ್ರಗಳು, 02 ಪುನರ್ವಸತಿ ಕೇಂದ್ರಗಳು ನಡೆಯುತ್ತಿದ್ದು, ಸದರಿ ಶಾಲೆ ಹಾಗೂ ತರಬೇತಿ ಕೇಂದ್ರಗಳಿಗೆ ಕೇಂದ್ರ ಸರ್ಕಾರದಿಂದ ಶೇ.90ರಷ್ಟು ಅನುದಾನವನ್ನು ಮಂಜೂರು ಮಾಡಲಾಗುತ್ತಿದ್ದು, ಉಳಿದ ಶೇ.10ರಷ್ಟು ವೆಚ್ಚವನ್ನು ಸಂಸ್ಥೆಯವರು ಭರಿಸಬೇಕಾಗಿರುತ್ತದೆ.

**6. ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹಧನ:**

ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. 2001-02ನೇ ಸಾಲಿನಿಂದ ಈ ಯೋಜನೆಯ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ.

**8. ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ಯೋಜನೆ:**

ಸಾರ್ವತ್ರಿಕ ಪರೀಕ್ಷೆಗಳಲ್ಲಿ ಶೇಕಡ 60 ಕ್ಕಿಂತಲೂ ಹೆಚ್ಚಿನ ಅಂಕಗಳನ್ನು ಪಡೆದ ಪ್ರತಿಭಾನ್ವಿತ ವಿಕಲಚೇತನ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದಾಗಿದೆ. ಈ ಯೋಜನೆಯನ್ನು 2001-02ನೇ ಸಾಲಿನಿಂದ ಬಿ.ಎಡ್, ಎಂ.ಎಡ್. ಮತ್ತು ಟಿ.ಸಿ.ಹೆಚ್. ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗಿದೆ.

**9. ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ:**

ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಎಸ್.ಎಸ್.ಎಲ್.ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರುಪಾವತಿಸುವ ಯೋಜನೆಯನ್ನು 2013-14ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ಯಾವುದೇ ಆದಾಯಮಿತಿ ಇರುವುದಿಲ್ಲ.

**10. ಬ್ರೈಲ್ ಮುದ್ರಣಾಲಯ:**

ರಾಜ್ಯಾದ್ಯಂತ ವಿಶೇಷ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ದೃಷ್ಟಿದೋಷವುಳ್ಳ ಮಕ್ಕಳಿಗೆ ಬ್ರೈಲ್ ಪುಸ್ತಕಗಳನ್ನು ಉಚಿತವಾಗಿ ನೀಡಲು ಮೈಸೂರಿನಲ್ಲಿರುವ ಬ್ರೈಲ್ ಮುದ್ರಣಾಲಯದಲ್ಲಿ ಮುದ್ರಿಸಿ ಸರಬರಾಜು ಮಾಡಲಾಗುತ್ತಿದೆ.

**11. ವಿಶೇಷ ಶಿಕ್ಷಕರ ತರಬೇತಿ ಕೇಂದ್ರ ಯೋಜನೆ:**

ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಶಿಕ್ಷಕರಿಗೆ ವಿಶೇಷ ಶಿಕ್ಷಣ ನೀಡಲು ತಲಾ ಒಂದರಂತೆ ವಿಶೇಷ ಶಿಕ್ಷಕರ ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ನಡೆಸುತ್ತಿದ್ದು, ಪ್ರತಿ ವರ್ಷ ಪ್ರತಿ ಕೇಂದ್ರದಲ್ಲಿ 25 ಪ್ರಶಿಕ್ಷಣಾರ್ಥಿಗಳು ತರಬೇತಿ ಪಡೆಯಲು ಅವಕಾಶವಿರುತ್ತದೆ.

**12. ಮಾನಸಿಕ ಅಸ್ವಸ್ಥ, ಸೆರಬ್ರಲ್ ಪಾಲ್ಸಿ, ಆಟಿಸಂ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರಗಳು:**

ಸೆರಬ್ರಲ್ ಪಾಲ್ಸಿ, ಆಟಿಸಂ, ಮಾನಸಿಕ ಅಸ್ವಸ್ಥ ಹಾಗೂ ತೀವ್ರತರದ ಅಂಗವೈಕಲ್ಯತೆ ಹೊಂದಿರುವ ಮೂರರಿಂದ 25 ವರ್ಷದ ಒಳಗಿನ ಮಕ್ಕಳಿಗಾಗಿ 02 ಹಗಲು ಯೋಗಕ್ಷೇಮ ಕೇಂದ್ರಗಳನ್ನು ಬೆಂಗಳೂರು ನಗರ ಜಿಲ್ಲೆಯಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸುತ್ತಿದ್ದು, ಪ್ರತಿ ಕೇಂದ್ರದಲ್ಲಿ 25 ಮಕ್ಕಳನ್ನು ದಾಖಲಿಸಲು ಅವಕಾಶವಿದ್ದು, ಪ್ರತಿ ಮಗುವಿಗೆ ಮಾಸಿಕ ರೂ.10,000/-ಗಳಂತೆ ವಾರ್ಷಿಕ 25.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

## (ಬಿ) ಉದ್ಯೋಗ ಮತ್ತು ತರಬೇತಿ:

**1. ಅಂಗವಿಕಲ ಪುರುಷ ಹಾಗೂ ಮಹಿಳೆಯರ ಸರ್ಕಾರದ ವಸತಿನಿಲಯ:**

ಬೆಂಗಳೂರಿನಲ್ಲಿ ವಿಕಲಚೇತನ ಮಹಿಳೆ ಮತ್ತು ವಿಕಲಚೇತನ ಪುರುಷರಿಗಾಗಿ ಅಂಗವಿಕಲ ಉದ್ಯೋಗಸ್ಥ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗಾಗಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ವಸತಿ ನಿಲಯವನ್ನು ಸರ್ಕಾರದಿಂದ ನಡೆಸಲಾಗುತ್ತಿದೆ. ಪ್ರಸ್ತುತ ಈ ಎರಡೂ ವಸತಿ ನಿಲಯಗಳು ಬೆಂಗಳೂರಿನ ಕೆಂಗೇರಿಯಲ್ಲಿ ನಡೆಸಲಾಗುತ್ತಿದೆ. ಪ್ರತಿ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.

**2. ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಸ್ವಯಂ ಸೇವಾ ಸಂಸ್ಥೆಗಳ ಮುಖಾಂತರ ವಸತಿ ನಿಲಯಗಳು:**

ಅಂಗವಿಕಲ ಉದ್ಯೋಗಸ್ಥ ಮಹಿಳೆಯರಿಗಾಗಿ ಹಾಗೂ ವಿದ್ಯಾರ್ಥಿನಿ/ತರಬೇತಿದಾರರಿಗೆ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 25 ಜಿಲ್ಲೆಗಳಲ್ಲಿ ಮಹಿಳಾ ವಸತಿ ನಿಲಯಗಳು (ಬೆಂಗಳೂರು ನಗರ ಜಿಲ್ಲೆಯಲ್ಲಿ 4 ವಸತಿ ನಿಲಯಗಳು) ನಡೆಯುತ್ತಿವೆ. ಸದರಿ ವಸತಿ ನಿಲಯದಲ್ಲಿ ಉದ್ಯೋಗಸ್ಥ ವಿಕಲಚೇತನ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಹಾಗೂ ತರಬೇತಿದಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿದ್ದು, ವಿದ್ಯಾರ್ಥಿನಿಯರು ಹಾಗೂ ತರಬೇತಿದಾರರಿಗೆ ಮಾತ್ರ ಉಚಿತ ಊಟದ ವ್ಯವಸ್ಥೆ ಇರುತ್ತದೆ.

**3. ಗ್ರಾಮೀಣ ಪುನರ್ವಸತಿ ಯೋಜನೆ:**

ಈ ಯೋಜನೆಯನ್ನು ರಾಜ್ಯದ ಎಲ್ಲಾ 30 ಜಿಲ್ಲೆಗಳ 176 ತಾಲ್ಲೂಕುಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. ಪ್ರತಿ ಗ್ರಾಮ ಪಂಚಾಯತಿ ಅಡಿಯಲ್ಲಿ ಎಸ್.ಎಸ್.ಎಲ್.ಸಿ. ಉತ್ತೀರ್ಣ/ ಅನುತ್ತೀರ್ಣರಾದ ಸಮರ್ಥ ವಿಕಲಚೇತನರನ್ನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತರೆಂದು ಹಾಗೂ ತಾಲ್ಲೂಕು ಪಂಚಾಯಿತಿ ಕಚೇರಿಯಲ್ಲಿ ಸ್ಥಳೀಯ ಪದವೀಧರ ವಿಕಲಚೇತನರೊಬ್ಬರನ್ನು ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರೆಂದು, ಸ್ಥಳೀಯ ನಗರ ಪ್ರದೇಶಗಳಲ್ಲಿ ನಗರ ಪುನರ್ವಸತಿ ಕಾರ್ಯಕರ್ತರೆಂದು ಮತ್ತು ನಿರ್ದೇಶನಾಲಯದಲ್ಲಿ ರಾಜ್ಯ ಸಂಯೋಜಕರನ್ನು ಗೌರವಧನ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಈ ಕಾರ್ಯಕರ್ತರ ಮೂಲಕ ವಿಕಲಚೇತನರಿಗೆ ಎಲ್ಲಾ ಸೇವಾ ಸೌಲಭ್ಯಗಳನ್ನು ಅವರಿರುವ ಸ್ಥಳಗಳಲ್ಲಿಯೇ ವಿಕಲಚೇತನರ ಮೂಲಕವೇ ತಲುಪಿಸಲಾಗುವುದು.

ಪ್ರಸ್ತುತ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು ಹಾಗೂ ನಗರ ಪುನರ್ವಸತಿ ಕಾರ್ಯಕರ್ತರುಗಳಿಗೆ ಮಾಹೆಯಾನ ರೂ.6000/- ಗೌರವಧನವನ್ನು ಹಾಗೂ ವಿವಿದ್ಧೋದ್ದೇಶ ಪುನರ್ವಸತಿ ಕಾರ್ಯಕರ್ತರುಗಳಿಗೆ ಮಾಹೆಯಾನ ರೂ.12,000/-ಗಳ ಗೌರವಧನವನ್ನು ನೀಡಲಾಗುತ್ತಿದೆ.

**ಮರಣ ಪರಿಹಾರ ನಿಧಿ ಯೋಜನೆ:**

ಪ್ರಸ್ತುತ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕರ್ತರು ನಿಧನ ಹೊಂದಿದ್ದಲ್ಲಿ ರೂ.50,000/-ಗಳ ಪರಿಹಾರ ಧನ ನೀಡಲು ಅವಕಾಶವಿರುತ್ತದೆ.

## ಸಿ. ಆರ್ಥಿಕ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳು:

**1. ಸಮಾಜ ಸೇವಾ ಸಂಕೀರ್ಣ:**

ನಿರ್ಗತಿಕ ಬುದ್ದಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ. ಪ್ರಸ್ತುತ ಸಂಸ್ಥೆಯಲ್ಲಿ 80 ನಿವಾಸಿಗಳು ದಾಖಲಾಗಿರುತ್ತಾರೆ.

**2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:**

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾ ವತಿಯಿಂದ ನಡೆಸಲಾಗುತ್ತಿದೆ. ಪ್ರಸ್ತುತ ಬೆಂಗಳೂರು ಅನುಪಾಲನಾ ಕೇಂದ್ರದಲ್ಲಿ 98 ಮಂದಿ ಹಾಗೂ ಹುಬ್ಬಳ್ಳಿ ಅನುಪಾಲನ ಕೇಂದ್ರದಲ್ಲಿ 77 ನಿವಾಸಿಗಳು ದಾಖಲಾಗಿರುತ್ತಾರೆ.

**3. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:**

ಮಾನಸಿಕ ಅಸ್ವಸ್ಥರಿಗಾಗಿ ಮಾನಸ ಕೇಂದ್ರಗಳನ್ನು ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ನಡೆಸುತ್ತಿದ್ದು, ರಾಜ್ಯ ಉಚ್ಚ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ.

**4. ಬುದ್ಧಿಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ:**

ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ, ತಾಯಿ, ಪೋಷಕರ ವಿಮಾ ಯೋಜನೆಯನ್ನು ಭಾರತೀಯ ಜೀವ ವಿಮಾ ನಿಗಮದ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಬುದ್ಧಿಮಾಂದ್ಯ ಮಕ್ಕಳ/ವ್ಯಕ್ತಿಗಳ ತಂದೆ, ತಾಯಿ, ಪೋಷಕರು ಮರಣ ಹೊಂದಿದ ನಂತರ ಬುದ್ಧಿಮಾಂದ್ಯ ಮಕ್ಕಳ ಜೀವನ ನಿರ್ವಹಣೆಗಾಗಿ ರೂ.20,000/- ಗಳ ಪರಿಹಾರ ಧನವನ್ನು ಕುಟುಂಬದ ನಾಮ ನಿರ್ದೇಶಿತ ಸದಸ್ಯರಿಗೆ ಪಾವತಿಸಲಾಗುತ್ತಿದೆ.

**5. ವಿಕಲಚೇತನ ವ್ಯಕ್ತಿಗಳನ್ನು ಸಾಮಾನ್ಯರು ಮದುವೆಯಾದಲ್ಲಿ ಪ್ರೋತ್ಸಾಹ ಧನ ನೀಡುವ ಯೋಜನೆ:**

ವಿಕಲಚೇತನ ಯುವಕ/ಯುವತಿಯರನ್ನು ವಿವಾಹವಾಗುವ ಸಾಮಾನ್ಯ ಯುವಕ/ ಯುವತಿಯರಿಗೆ ನಿರಂತರವಾಗಿ ಮಾಸಿಕ ಆದಾಯ ದೊರಕಿಸಲು ವಿಕಲಚೇತನ ವ್ಯಕ್ತಿಯ ಹೆಸರಿನಲ್ಲಿ ರೂ.50,000/-ಗಳನ್ನು ಮದುವೆಯಾದ ಸಾಮಾನ್ಯ ವ್ಯಕ್ತಿ ಹಾಗೂ ವಿಕಲಚೇತನರ ಜಂಟಿ ಹೆಸರಿನಲ್ಲಿ 05 ವರ್ಷದ ಅವಧಿಗೆ ಹೂಡಿಕೆಯ ರೂಪದಲ್ಲಿ ನೀಡಿ ಪ್ರೋತ್ಸಾಹ ನೀಡಲು ಹಾಗೂ ಅದರಿಂದ ಬರುವ ಬಡ್ಡಿ ಹಣವನ್ನು ಉಪಯೋಗಿಸುವುದು ಹಾಗೂ 05 ವರ್ಷಗಳ ನಂತರ ಠೇವಣಿ ಮೊತ್ತವನ್ನು ವಾಪಸ್ಸು ಪಡೆಯಬಹುದು ಅಥವಾ ಮುಂದುವರೆಸಲು ಅವಕಾಶವಿರುತ್ತದೆ.

**6. ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಭತ್ಯೆ ಒದಗಿಸುವ ಯೋಜನೆ :**

ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆಯಾ ಸೇವೆ, ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 5 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

**7. ನಿರುದ್ಯೋಗ ಭತ್ಯೆ:-**

ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡಿರುವ ನಿರುದ್ಯೋಗಿ ವಿಕಲಚೇತನರಿಗೆ ಮಾಸಿಕ ರೂ.1000/-ಗಳ ನಿರುದ್ಯೋಗ ಭತ್ಯೆಯನ್ನು ಮಂಜೂರು ಮಾಡಲಾಗುತ್ತಿದೆ.

## (ಡಿ) ಪುನರ್ವಸತಿ ಯೋಜನೆಗಳು:

**1. ಅಂಗವಿಕಲರಿಗೆ ಸಾಧನ ಸಲಕರಣೆಗಳು :**

ಈ ಯೋಜನೆಯಡಿಯಲ್ಲಿ ಅಂಗವಿಕಲರಿಗೆ ಅವಶ್ಯವಾಗಿರುವ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ. ಫಲಾನುಭವಿಯ ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದ ಫಲಾನುಭವಿಗಳಿಗೆ ರೂ.11,500/- ಮತ್ತು ನಗರ ಪ್ರದೇಶದ ಫಲಾನುಭವಿಗಳಿಗೆ ರೂ.24,000/- ನಿಗದಿಗೊಳಿಸಲಾಗಿದೆ. ಈ ಯೋಜನೆಯಡಿ ರೂ.15,000/-ಗಳ ಮಿತಿಯೊಳಗೆ ವಿಕಲಚೇತನರಿಗೆ ಅವಶ್ಯವಿರುವ ಗಾಲಿ ಕುರ್ಚಿ, ಸಾದಾ ತ್ರಿಚಕ್ರವಾಹನ, ಕ್ಯಾಲಿಪರ್ಸ್, ಕ್ರಚಸ್, ಶ್ರವಣ ಸಾಧನ, ವೈಟ್ ಕೇನ್, ಬ್ರೈಲ್ ವಾಚ್ ಇನ್ನಿತರ ಸಲಕರಣೆಗಳನ್ನು ಉಚಿತವಾಗಿ ನೀಡಲಾಗುತ್ತಿದೆ.

2. ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್ ಯೋಜನೆ :

ಎಸ್.ಎಸ್.ಎಲ್.ಸಿ ನಂತರ ವ್ಯಾಸಂಗ ಮಾಡುವ ದೃಷ್ಟಿದೋಷವುಳ್ಳ ವಿಕಲಚೇತನ ವಿದ್ಯಾರ್ಥಿಗಳು ಇತ್ತೀಚಿನ ತಂತ್ರಜ್ಞಾನ ಮತ್ತು ತಂತ್ರಾಂಶದ ಉಪಯೋಗದಿಂದ ಉನ್ನತ ಶಿಕ್ಷಣವನ್ನು ಪಡೆಯಲು ಅನುಕೂಲವಾಗುವಂತೆ ಮಾತನಾಡುವ (ಟಾಕಿಂಗ್) ಲ್ಯಾಪ್‌ಟಾಪ್‌ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ

3. ತೀವ್ರತರಹ ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರವಾಹನ ಯೋಜನೆ :

20 ರಿಂದ 60 ವರ್ಷದ ವಯೋಮಾನದ ತೀವ್ರತರವಾದ ದೈಹಿಕ ವಿಕಲಚೇತನರಿಗೆ ಓಡಾಡಲು ಅನುಕೂಲವಾಗುವಂತೆ ಜೀವಿತ ಕಾಲದಲ್ಲಿ ಒಂದು ಬಾರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನವನ್ನು ಮಂಜೂರು ಮಾಡಲಾಗುತ್ತದೆ. ಈ ಯೋಜನೆಯಡಿ ಫಲಾನುಭವಿಯ ಕುಟುಂಬದ ವಾರ್ಷಿಕ ವರಮಾನ ರೂ.2.00 ಲಕ್ಷಗಳಿಗಿಂತ ಕಡಿಮೆ ಇರಬೇಕಾಗಿರುತ್ತದೆ.

4. ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರ ಯೋಜನೆ:-

ವಿಕಲಚೇತನರನ್ನು ಗುರುತಿಸಿ ಅವರಿಗೆ ಶೈಕ್ಷಣಿಕ, ಉದ್ಯೋಗ ಮತ್ತು ತರಬೇತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆಗಳನ್ನು ಅವರ ಮನೆ ಬಾಗಿಲಿನಲ್ಲಿಯೇ ಒದಗಿಸಿ ಅವರ ಸರ್ವಾಂಗೀಣ ಪುನರ್ವಸತಿಯನ್ನು ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶವಾಗಿದೆ. ಈ ಯೋಜನೆಯಡಿ ವಿಕಲಚೇತನರಿಗೆ ಅಗತ್ಯವಿರುವ ವೈದ್ಯಕೀಯ ಸೇವೆ, ವೃತ್ತಿ ಚಿಕಿತ್ಸೆ, ವಿವಿಧ ರೀತಿಯ ಸಾಧನ ಸಲಕರಣೆಗಳನ್ನು ಕೇಂದ್ರಗಳಲ್ಲಿ ತಯಾರಿಸಿ ಒದಗಿಸಲಾಗುವುದು. ಪ್ರಸ್ತುತ 16 ಜಿಲ್ಲೆಗಳಲ್ಲಿ ಜಿಲ್ಲಾ ಪುನರ್ವಸತಿ ಕೇಂದ್ರಗಳು ನಡೆಯುತ್ತಿವೆ. (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬೆಳಗಾವಿ, ಬೀದರ್, ಚಿತ್ರದುರ್ಗ, ದಕ್ಷಿಣ ಕನ್ನಡ, ಮೈಸೂರು, ಉಡುಪಿ, ಹಾಸನ, ವಿಜಯಪುರ, ರಾಯಚೂರು, ಚಿಕ್ಕಮಗಳೂರು, ಬಳ್ಳಾರಿ, ಹಾವೇರಿ, ಚಾಮರಾಜನಗರ, ಗದಗ)

5. ಅಂಗವಿಕಲತೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆಗಾಗಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-

ಅಂಗವಿಕಲ ವ್ಯಕ್ತಿಗಳಿಗೆ ಅಂಗವಿಕಲತೆಯನ್ನು ನಿವಾರಿಸಲು ಶಸ್ತ್ರ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆ ಸಂಜಯಗಾಂಧಿ ಆಸ್ಪತ್ರೆಗಳಲ್ಲಿ ಹಾಗೂ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಅಂಗವಿಕಲತೆ ನಿವಾರಣಾ ಶಸ್ತ್ರ ಚಿಕಿತ್ಸೆಗಾಗಿ ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ.

6. ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳ ವಿತರಿಸುವ ಯೋಜನೆ:-

ಅಂಧ ವಿದ್ಯಾರ್ಥಿಗಳು ತಮ್ಮ ದೈನಂದಿನ ಚಟುವಟಿಕೆಗಳಲ್ಲಿ ಸ್ವಾವಲಂಬಿಗಳಾಗಲು ರಾಜ್ಯದ ಅಂಧ ವಿದ್ಯಾರ್ಥಿಗಳಿಗೆ ಟಾಂಕಿಗ್ ಮೊಬೈಲ್, ಬ್ರೈಲ್ ವಾಚ್, ವಾಕಿಂಗ್ ಸ್ಟಿಕ್ ಮತ್ತು ಇನ್ನಿತರ ಸಾಧನೆಗಳನ್ನು ಒಳಗೊಂಡ ತಲಾ ರೂ.25000/-ಗಳ ಕಿಟ್‌ಗಳನ್ನು ವಿತರಿಸಲಾಗುತ್ತಿದೆ.

7. ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ವಿತರಿಸುವ ಯೋಜನೆ:-

ಶ್ರವಣದೋಷವುಳ್ಳವರು ಉದ್ಯೋಗಾವಕಾಶದಿಂದ ವಂಚಿತರಾಗುತ್ತಿರುವುದನ್ನು ಮನಗಂಡು ಅವರು ಸ್ವಯಂ ಉದ್ಯೋಗ ಕೈಗೊಂಡು ಸ್ವಾವಲಂಬಿಗಳಾಗಲು ಅನುವಾಗುವಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಶ್ರವಣದೋಷವುಳ್ಳ ವ್ಯಕ್ತಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ವಿತರಿಸಲಾಗುತ್ತಿದೆ.

(ಇ). ಸಾಧನೆ ಮತ್ತು ಪ್ರತಿಭೆ ಯೋಜನೆ:

ವಿಕಲಚೇತನ ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡಲು "ಸಾಧನೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ಕ್ರೀಡೆಗಳಲ್ಲಿ ವಿಶೇಷ ಸಾಧನೆಗೈದ ವಿಕಲಚೇತನರಿಗೆ ರೂ.50,000/-ಗಳ ಧನ ಸಹಾಯವನ್ನು ನೀಡಲಾಗುತ್ತಿದೆ.

ವಿಕಲಚೇತನರು ನೀಡುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿ ಧನಸಹಾಯ ನೀಡುವ ಸಲುವಾಗಿ "ಪ್ರತಿಭೆ" ಎಂಬ ಯೋಜನೆಯು ಜಾರಿಯಲ್ಲಿದ್ದು, ವೈಯಕ್ತಿಕ ಸಾಂಸ್ಕೃತಿಕ ರೂ.2,000/-ಗಳು ಹಾಗೂ ಸಮೂಹ ಕಾರ್ಯಕ್ರಮಕ್ಕೆ ರೂ.10,000/-ಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

(ಎಫ್). ನಿರಾಮಯ ಆರೋಗ್ಯ ವಿಮಾ ಯೋಜನೆ :

ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲತೆ ಹೊಂದಿರುವ ಪ್ರತಿ ವ್ಯಕ್ತಿ ಹಾಗೂ ಮಗುವಿಗೆ ವರ್ಷಕ್ಕೆ ನಿರಾಮಯ ಆರೋಗ್ಯ ಯೋಜನೆಯಡಿ ಒಂದು ಬಾರಿ ಪ್ರೀಮಿಯಂ ಮೊತ್ತ ರೂ.250/-ಗಳನ್ನು ಭಾರತ ಸರ್ಕಾರದಿಂದ ಗುರುತಿಸಲ್ಪಟ್ಟ ಅಧಿಕೃತ ಸಂಸ್ಥೆಯಾದ ಅಂಗವಿಕಲರ ಮನಶ್ಚೇತನ ಸಂಸ್ಥೆ (ರಿ) (ಎ.ಪಿ.ಡಿ) ಬೆಂಗಳೂರು ರವರಿಗೆ ಪಾವತಿಸಲಾಗುವುದು. ಪ್ರತಿ ವರ್ಷ ಯೋಜನೆಯಡಿ ಬರುವ ಫಲಾನುಭವಿಗಳು ರೂ.1.00 ಲಕ್ಷಗಳವರೆಗೆ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ. ಈ ಮೊತ್ತದಲ್ಲಿ ರೂ.60,000/-ಗಳವರೆಗೆ ಸರ್ಜರಿ ವೆಚ್ಚ ಉಳಿದ ರೂ.40,000/-ಗಳಲ್ಲಿ ವೈದ್ಯಕೀಯ ಖರ್ಚು ಥೆರಪಿ, ಪ್ರಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ.

## (ಜಿ). ಸ್ಪರ್ಧಾ ಚೇತನ ಯೋಜನೆ:-

ಈ ಯೋಜನೆಯಡಿ ವಿಶೇಷ ಸಾಮರ್ಥ್ಯ/ಭಿನ್ನ ಸಾಮರ್ಥ್ಯದ ವಿದ್ಯಾವಂತ ವ್ಯಕ್ತಿಗೆಗಳಿಗೆ ಐ.ಎ.ಎಸ್./ಕೆ.ಎ.ಎಸ್. ಹಾಗೂ ಇತರೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸರ್ಕಾರದ ಇತರೆ ಇಲಾಖೆಗಳಡಿ ಗುರುತಿಸಲ್ಪಟ್ಟ ಪೂರ್ವ ಪರೀಕ್ಷಾ ತರಬೇತಿ ಕೇಂದ್ರಗಳು ಹಾಗೂ ಈ ಇಲಾಖೆಯಿಂದ ಗುರುತಿಸಲ್ಪಟ್ಟ ತರಬೇತಿ ಕೇಂದ್ರಗಳ ಮೂಲಕ ತರಬೇತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

## (ಹೆಚ್). ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ (UNIQUE DISABILITY ID)

ನೀಡುವ ಯೋಜನೆಯು ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆಯಾಗಿದೆ. ರಾಜ್ಯ ಸರ್ಕಾರದಿಂದ ನೇಮಿಸಲಾಗುವ ವೈದ್ಯಕೀಯ ಪ್ರಾಧಿಕಾರಗಳಿಂದ ದೃಢೀಕರಿಸಲಾಗುವ ವೈದ್ಯಕೀಯ ಪ್ರಮಾಣ ಪತ್ರದ ಸಮಗ್ರ ಮಾಹಿತಿಯುಳ್ಳ ಗಣಕೀಕೃತ ಗುರುತಿನ ಚೀಟಿಯನ್ನು ವಿಕಲಚೇತನ ವ್ಯಕ್ತಿಗಳಿಗೆ ನೀಡುವ ವ್ಯವಸ್ಥೆಯಾಗಿದ್ದು, ಇದರಲ್ಲಿ ವಿಕಲಚೇತನ ವ್ಯಕ್ತಿಯ ವಿವರಗಳು ಹಾಗೂ ಅವರಲ್ಲಿರುವ ವಿಕಲತೆಯ ವಿವರ ಮತ್ತು ಪ್ರಮಾಣವನ್ನು ನಮೂದಿಸಲಾಗಿರುತ್ತದೆ.

# ಹಿರಿಯ ನಾಗರಿಕರಿಗಾಗಿ ಜಾರಿಗೊಳಿಸುತ್ತಿರುವ ಯೋಜನೆಗಳು

**1. ಹಗಲು ಯೋಗಕ್ಷೇಮ ಕೇಂದ್ರಗಳು:**

ರಾಜ್ಯದ 30 ಜಿಲ್ಲೆಗಳಿಗೆ ಹಗಲು ಯೋಗಕ್ಷೇಮ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದ ಮಂಜೂರಾತಿ ದೊರೆತಿದ್ದು, ಪ್ರತಿ ಕೇಂದ್ರದಲ್ಲಿ ಸುಮಾರು 50-150 ಫಲಾನುಭವಿಗಳಿಗೆ ಅವಕಾಶ ಕಲ್ಪಿಸಿಕೊಡಲಾಗಿದ್ದು, ಸದರಿ ಯೋಜನೆಗೆ ಸರ್ಕಾರದಿಂದ ವಾರ್ಷಿಕ ರೂ.11.20 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲಾಗುತ್ತದೆ.

**2. ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳು:**

ಹಿರಿಯ ನಾಗರಿಕರು ಕಿರುಕುಳ, ಹಣಕಾಸಿನ ಶೋಷಣೆ, ಮಾನಸಿಕ ತುಮುಲ ಮತ್ತು ದುರ್ಬಲತಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಇಂತಹ ಸಮಸ್ಯೆಗಳ ನಿವಾರಣೆಗಾಗಿ ಹಾಗೂ ತುರ್ತು ಸಹಾಯಕ್ಕಾಗಿ ಹಿರಿಯ ನಾಗರಿಕರ ಸಹಾಯವಾಣಿ ಕೇಂದ್ರಗಳನ್ನು ರಾಜ್ಯದ 30 ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 28 ಜಿಲ್ಲೆಗಳಲ್ಲಿ ಸಹಾಯವಾಣಿ ಕೇಂದ್ರಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಆವರಣದಲ್ಲಿ, ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಿಂದ ನಡೆಸಲಾಗುತ್ತಿದೆ.

**3. ಹಿರಿಯ ನಾಗರಿಕರ ವೃದ್ಧಾಶ್ರಮ:**

ರಾಜ್ಯದ 30 ಜಿಲ್ಲೆಗಳಲ್ಲಿ ನಿರ್ಗತಿಕ ಹಿರಿಯ ನಾಗರಿಕರಿಗಾಗಿ ವೃದ್ಧಾಶ್ರಮಗಳನ್ನು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಸಲಾಗುತ್ತಿದ್ದು, ಈ ವೃದ್ಧಾಶ್ರಮದಲ್ಲಿ 25 ನಿರ್ಗತಿಕ ಹಿರಿಯ ನಾಗರಿಕರನ್ನು ದಾಖಲಿಸಿಕೊಳ್ಳಲು ಅವಕಾಶವಿದ್ದು, ಒಂದು ವೃದ್ಧಾಶ್ರಮದ ನಿರ್ವಹಣೆಗಾಗಿ ವಾರ್ಷಿಕ ರೂ.8.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದ್ದು, ಇದರಲ್ಲಿ ಸಿಬ್ಬಂದಿ ವೆಚ್ಚ, ನಿರ್ವಹಣಾ ವೆಚ್ಚ, ಔಷಧಿ, ಕಟ್ಟಡ ಬಾಡಿಗೆ, ವೃತ್ತ ಪತ್ರಿಕೆ ಹಾಗೂ ಇತರೆ ವೆಚ್ಚಗಳಿಗಾಗಿ ಒಟ್ಟು ಯೋಜನಾ ವೆಚ್ಚದ ಶೇ.90ರಷ್ಟು ಅನುದಾನವನ್ನು ಸ್ವಯಂ ಸೇವಾ ಸಂಸ್ಥೆಗಳಿಗೆ ನೀಡಲಾಗುತ್ತಿದ್ದು ಉಳಿದ ಶೇ.10ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಅನುದಾನವನ್ನು ಜಿಲ್ಲಾ ಪಂಚಾಯತ್, ಮೂಲಕ ಮಂಜೂರು ಮಾಡಲಾಗುತ್ತಿದೆ.

ರಾಜ್ಯದ ಪ್ರತಿ ಕಂದಾಯ ಉಪ ವಿಭಾಗದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ವೃದ್ಧಾಶ್ರಮಗಳನ್ನು ಪ್ರಾರಂಭಿಸಲು ಅವಕಾಶವಿದ್ದು, ಪ್ರಸ್ತುತ 8 ಕಂದಾಯ ಉಪ ವಿಭಾಗಕ್ಕೆ ವೃದ್ಧಾಶ್ರಮ ನಡೆಸಲು ಆಡಳಿತಾತ್ಮಕ ಮಂಜೂರಾತಿ ದೊರೆತ್ತಿರುತ್ತದೆ.

**4. ಹಿರಿಯ ನಾಗರಿಕರಿಗೆ ಗುರುತಿನ ಚೀಟಿಗಳು:**

60 ವರ್ಷ ಮೇಲ್ಪಟ್ಟ ವಯೋಮಾನದ ಹಿರಿಯ ನಾಗರಿಕರ ಗುರುತಿನ ಚೀಟಿ ಪಡೆಯಲು ಸೇವಾ ಸಿಂಧು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿ ಪಡಿಸಲಾಗಿದ್ದು, ದಿ:01.10.2018ರಿಂದ ಹಿರಿಯ ನಾಗರಿಕರು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿ ಹಿರಿಯ ನಾಗರಿಕರ ಗುರುತಿನ ಚೀಟಿಯನ್ನು ಪಡೆಯಬಹುದಾಗಿದೆ.

## ಅನುಬಂಧ-02

### ವಿಕಲಚೇತನರನ್ನು ನೋಡಿಕೊಳ್ಳಲು ಇಲಾಖಾ ವತಿಯಿಂದ ನಡೆಯುತ್ತಿರುವ ಕೇಂದ್ರಗಳು

**1. ಮಾನಸಿಕ ಅಸ್ವಸ್ಥರಿಗೆ ಮಾನಸ ಕೇಂದ್ರಗಳು:**

ಮಾನಸಿಕ ಅಸ್ವಸ್ಥರಿಗಾಗಿ ಮಾನಸ ಕೇಂದ್ರಗಳನ್ನು ಬೆಂಗಳೂರು ನಗರ ಹಾಗೂ ಬೆಳಗಾವಿ ಜಿಲ್ಲೆಗಳಲ್ಲಿ ನಡೆಸುತ್ತಿದ್ದು, ರಾಜ್ಯ ಉಚ್ಛ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳಿಂದ ಆದೇಶಿಸಲ್ಪಡುವ ಮಾನಸಿಕ ಅಸ್ವಸ್ಥರನ್ನು ಹಾಗೂ ರಸ್ತೆಗಳಲ್ಲಿ ಓಡಾಡುವ ನಿರ್ಗತಿಕ ಮಾನಸಿಕ ಅಸ್ವಸ್ಥರನ್ನು ಈ ಕೇಂದ್ರಗಳಲ್ಲಿ ನಿರ್ದಿಷ್ಟ ವೈದ್ಯಕೀಯ ಪ್ರಾಧಿಕಾರದ ಆದೇಶದ ಮೇರೆಗೆ ದಾಖಲಿಸಲು ಅವಕಾಶವಿರುತ್ತದೆ. ಈ ಕೇಂದ್ರಗಳಲ್ಲಿ ಫಲಾನುಭವಿಗಳಿಗೆ ಉಚಿತ ಊಟ, ವಸತಿ, ವೈದ್ಯಕೀಯ ಶುಶ್ರೂಷೆ, ವೈದ್ಯಕೀಯ ಸಲಹೆ(ಕೌನ್ಸಲಿಂಗ್) ಸೌಲಭ್ಯವನ್ನು ನೀಡಲಾಗುತ್ತಿದ್ದು, ಇವು ಅಲ್ಪಾವಧಿ ಕೇಂದ್ರಗಳಾಗಿರುತ್ತವೆ.

**2. ಮಂದಮತಿ ಮಹಿಳೆಯರ ಅನುಪಾಲನಾ ಗೃಹ:**

18 ವರ್ಷ ಮೇಲ್ಪಟ್ಟ ನಿರ್ಗತಿಕ ಮಹಿಳಾ ಬುದ್ಧಿಮಾಂದ್ಯರಿಗೆ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ ಮತ್ತು ಸಂರಕ್ಷಣೆ ಒದಗಿಸುವ ಉದ್ದೇಶದಿಂದ ಮಂದಮತಿ ಮಹಿಳೆಯರ ಅನುಪಾಲನಾ ಗೃಹಗಳನ್ನು ಬೆಂಗಳೂರು ನಗರ ಹಾಗೂ ಹುಬ್ಬಳ್ಳಿಯಲ್ಲಿ ಇಲಾಖಾವತಿಯಿಂದ ನಡೆಸಲಾಗುತ್ತಿದೆ. ಪ್ರಸ್ತುತ ಬೆಂಗಳೂರು ಅನುಪಾಲನಾ ಕೇಂದ್ರದಲ್ಲಿ 98 ಮಂದಿ ಹಾಗೂ ಹುಬ್ಬಳ್ಳಿ ಅನುಪಾಲನ ಕೇಂದ್ರದಲ್ಲಿ 77 ನಿವಾಸಿಗಳು ದಾಖಲಾಗಿರುತ್ತಾರೆ.

**3. ಸಮಾಜ ಸೇವಾ ಸಂಕೀರ್ಣ:**

ನಿರ್ಗತಿಕ ಬುದ್ಧಿಮಾಂದ್ಯ ಪುರುಷರಿಗಾಗಿ ಸಮಾಜ ಸೇವಾ ಸಂಕೀರ್ಣ ಸಂಸ್ಥೆಯು ಬೆಂಗಳೂರಿನಲ್ಲಿ ಸರ್ಕಾರದ ವತಿಯಿಂದ ನಡೆಯುತ್ತಿದ್ದು, ಈ ಸಂಸ್ಥೆಯಲ್ಲಿ ಉಚಿತ ಊಟ, ವಸತಿ, ವೈದ್ಯಕೀಯ ಸೌಲಭ್ಯ, ಸಂರಕ್ಷಣೆ ಒದಗಿಸಲಾಗುತ್ತಿದೆ. ಪ್ರಸ್ತುತ ಸಂಸ್ಥೆಯಲ್ಲಿ 80 ನಿವಾಸಿಗಳು ದಾಖಲಾಗಿರುತ್ತಾರೆ.

**4. ಅಂಗವಿಕಲ ಪುರುಷ ಹಾಗೂ ಮಹಿಳೆಯರ ಸರ್ಕಾರದ ವಸತಿನಿಲಯ:**

ಬೆಂಗಳೂರಿನಲ್ಲಿ ವಿಕಲಚೇತನ ಮಹಿಳೆ ಮತ್ತು ವಿಕಲಚೇತನ ಪುರುಷರಿಗಾಗಿ ಅಂಗವಿಕಲ ಉದ್ಯೋಗಸ್ಥ ನೌಕರರು ಮತ್ತು ಪ್ರಶಿಕ್ಷಣಾರ್ಥಿಗಳಿಗಾಗಿ ಮಹಿಳೆಯರು ಹಾಗೂ ಪುರುಷರಿಗಾಗಿ ಪ್ರತ್ಯೇಕವಾದ ವಸತಿ ನಿಲಯವನ್ನು ಸರ್ಕಾರದಿಂದ ನಡೆಸಲಾಗುತ್ತಿದೆ. ಪ್ರಸ್ತುತ ಈ ಎರಡೂ ವಸತಿ ನಿಲಯಗಳು ಬೆಂಗಳೂರಿನ ಕೆಂಗೇರಿಯಲ್ಲಿ ನಡೆಸಲಾಗುತ್ತಿದೆ. ಪ್ರತಿ ವಸತಿ ನಿಲಯದಲ್ಲಿ 50 ನಿವಾಸಿಗಳನ್ನು ದಾಖಲಿಸಲು ಅವಕಾಶವಿರುತ್ತದೆ.

| ಕ್ರ.ಸಂ. | ಕೇಂದ್ರಗಳ ವಿವರ/ ಜಿಲ್ಲೆ |
|---|---|
| 1 | ಮಾನಸ ಕೇಂದ್ರ, ಬೆಂಗಳೂರು/ಬೆಳಗಾವಿ ಜಿಲ್ಲೆ |
| 2 | ಮಂದಮತಿ ಮಹಿಳೆಯರ ಅನುಪಾಲನಾ ಗೃಹ, (ಮಹಿಳೆಯರಿಗಾಗಿ) ಬೆಂಗಳೂರು/ಧಾರವಾಡ ಜಿಲ್ಲೆ |
| 3 | ಸಮಾಜ ಸೇವಾ ಸಂಕೀರ್ಣ (ಪುರಷರಿಗಾಗಿ), ಬೆಂಗಳೂರು ಜಿಲ್ಲೆ |
| 4 | ಅಂಗವಿಕಲ ನೌಕರರ ಹಾಗೂ ತರಬೇತಿದಾರರ (ಪುರುಷರು) ವಸತಿ ನಿಲಯ, ಬೆಂಗಳೂರು |
| 5 | ಅಂಗವಿಕಲ ನೌಕರರ ಹಾಗೂ ತರಬೇತಿದಾರರ (ಮಹಿಳೆಯರು) ವಸತಿ ನಿಲಯ, ಬೆಂಗಳೂರು |

ಇಲಾಖಾ ವತಿಯಿಂದ ನಡೆಯುತ್ತಿರುವ ದೃಷ್ಟಿದೋಷವುಳ್ಳ ಹಾಗೂ ಶ್ರವಣದೋಷವುಳ್ಳ ಮಕ್ಕಳ ವಿಶೇಷ ಶಾಲೆಗಳು

| ಕ್ರ ಸಂ. | ಜಿಲ್ಲೆಗಳು | ಕ್ರ ಸಂ. | ಶಾಲೆಯ ಹೆಸರು |
|---|---|---|---|
| 1 | ಮೈಸೂರು | 1 | ಸರ್ಕಾರಿ ಅಂಧ ಮಕ್ಕಳ ಶಾಲೆ, ತಿಲಕ್‌ನಗರ, ಮೈಸೂರು |
| | | 2 | ಸರ್ಕಾರಿ ಕಿವುಡು ಮಕ್ಕಳ ಶಾಲೆ, ತಿಲಕ್‌ನಗರ ಮೈಸೂರು |
| 2 | ಕಲಬುರುಗಿ | 3 | ಸರ್ಕಾರಿ ಅಂಧ ಮಕ್ಕಳ ಶಾಲೆ, ಸ್ಟೇಡಿಯಂ ಹತ್ತಿರ, ಗುಲ್ಬರ್ಗಾ |
| | | 4 | ಸರ್ಕಾರಿ ಕಿವುಡು ಮಕ್ಕಳ ಶಾಲೆ, ಆಳಂದ ಕಾಲೋನಿ ಗುಲ್ಬರ್ಗಾ |
| 3 | ಬೆಂಗಳೂರು | 5 | ಸರ್ಕಾರಿ ಕಿವುಡು ಮಕ್ಕಳ ಶಾಲೆ, ಇಂದಿರಾ ನಗರ, ಬೆಂಗಳೂರು |
| 4 | ಬೆಳಗಾವಿ | 6 | ಸರ್ಕಾರಿ ಕಿವುಡು ಮಕ್ಕಳ ಶಾಲೆ, ನೆಹರೂ ನಗರ ಅಂಚೆ, ಬೆಳಗಾವಿ |
| 5 | ದಾವಣಗೆರೆ | 7 | ಸರ್ಕಾರಿ ಅಂಧ ಮಕ್ಕಳ ಶಾಲೆ, ದೇವರಾಜ ಅರಸ್ ಬಡಾವಣೆ, ದಾವಣಗೆರೆ |
| 6 | ಧಾರವಾಡ | 8 | ಸರ್ಕಾರಿ ಅಂಧ ಮಕ್ಕಳ ಶಾಲೆ, ಹುಬ್ಬಳ್ಳಿ ಧಾರವಾಡ |
| 7 | ಬಳ್ಳಾರಿ | 9 | ಸರ್ಕಾರಿ ಕಿವುಡು ಮಕ್ಕಳ ಶಾಲೆ ಸರ್ಕಾರಿ ಕಿವುಡು ಮಕ್ಕಳ ಶಾಲೆ ಬಳ್ಳಾರಿ |

ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆಯಡಿ ನಡೆಯುತ್ತಿರುವ ವಿಶೇಷ ಶಾಲೆಗಳ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| 1 | ಬೆಂಗಳೂರು ನಗರ | 1 | ಸ್ನೇಹ ಭಾರತಿ ಶಿಕ್ಷಣ ಸಂಸ್ಥೆ ರಿ, ಸ್ನೇಹ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಪಾಠಶಾಲೆ, ಬೆಸ್ತಮಾನ ಹಳ್ಳಿ, ಕಸಬಾ ಹೋಬಳಿ, ಹತ್ತಿಬೆಲೆ ರಸ್ತೆ, ಆನೇಕಲ್, ಬೆಂಗಳೂರು ನಗರ | ಸ್ನೇಹ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಆನೇಕಲ್ | ಬುದ್ಧಿಮಾಂದ್ಯ ವಸತಿಯುತ | 49 |
| | | 2 | ವಿದ್ಯಾರಣ್ಯ ರಿ, ಮಂಡೂರು, ವಿರ್ಗೋನಗರ ಮಾರ್ಗ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು-560003. | ಸ್ಪೂರ್ತಿ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಮಂಡೂರು | ಬುದ್ಧಿಮಾಂದ್ಯ ವಸತಿಯುತ | 103 |
| | | 3 | ಜ್ಞಾನಜ್ಯೋತಿ ಅಂಗವಿಕಲರ ಪುನಶ್ಚೇತನ ಸಂಸ್ಥೆ(ರಿ), ಹೊಸಪೇಟೆ, ಹಕ್ಕಲು, ಹಳೇ ಸೊರಬ, ಶಿವಮೊಗ್ಗ ಜಿಲ್ಲೆ ಇವರು ಬೆಂಗಳೂರು ನಗರ ಜಿಲ್ಲೆಯಲ್ಲಿ ನಡೆಸುತ್ತಿರುವ ಬುದ್ಧಿಮಾಂದ್ಯ ಮಕ್ಕಳ ಶಾಲೆ ದೂ.ಸಂ.9448613652 | ಸ್ಪೂರ್ತಿ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಮಂಡೂರು | ಬುದ್ಧಿಮಾಂದ್ಯ ವಸತಿಯುತ | 53 |
| | | 4 | ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, # 11, ವಿಲ್ಲಾ ಸುಚಿತ, 1ನೇ ಅಡ್ಡರಸ್ತೆ, 17ನೇ ಎ ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ ಬೆಂಗಳೂರು ದೂ.ಸಂ: 25721444 9449864772/9448365929 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಹೆಚ್.ಎಸ್.ಆರ್ ಬಡಾವಣೆ ಬೆಂಗಳೂರು mahantesh@samarthnam.org | ಬುದ್ಧಿಮಾಂದ್ಯ ವಸತಿಯುತ | 97 |
| | | 5 | ಡಾ.ಎಸ್.ಆರ್ ಚಂದ್ರಶೇಖರ್ ವಾಕ್ ಶ್ರವಣ, ಸಂಸ್ಥೆ, ಹೆಣ್ಣೂರು ಮುಖ್ಯರಸ್ತೆ, ಕರಿಯನಪಾಳ್ಯ, ಲಿಂಗರಾಜಪುರಂ, ಬೆಂಗಳೂರು-560084 ದೂ.ಸಂ: 25460405/25470037 | ಸುನಾದ ಕಿವುಡು ಮಕ್ಕಳ ಶಾಲೆ ಲಿಂಗರಾಜಪುರಂ ಬೆಂಗಳೂರು ishroot@gmail.com | ಕಿವುಡು ಮಕ್ಕಳ ಶಾಲೆ ವಸತಿರಹಿತ | 174 |
| | | 6 | ಶ್ರೀ ಶತಶೃಂಗ ವಿದ್ಯಾ ಸಂಸ್ಥೆ ರಿ, ಶ್ರೀ ಸಾಯಿಬಾಬಾ ದೇವಸ್ಥಾನದ ಹತ್ತಿರ, ಕಾಮಾಕ್ಷಿಪಾಳ್ಯ ಪೋಲೀಸ್ ಸ್ಟೇಷನ್ ಹಿಂಭಾಗ, ಮಾಗಡಿ ಮುಖ್ಯರಸ್ತೆ, ಬೆಂಗಳೂರು-560079 ಮೊ.ಸಂ.9141278067/9341155451 | ಶ್ರೀಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆ ಬೆಂಗಳೂರು aissvs@gmail.com | ಕಿವುಡು ಮಕ್ಕಳ ಶಾಲೆ 115+37 | 152 |
| | | 7 | ಕರ್ನಾಟಕ ಹ್ಯಾಂಡಿಕ್ಯಾಪ್ಡ್ ವೆಲ್ಫೇರ್ ಅಸೋಸಿಯೇಷನ್, ಸಿಎ-5&6, ಅಸೋಸಿಯೇಷನ್ ಆವರಣ, ಜೀವನ ಭೀಮಾ ನಗರ, ಬೆಂಗಳೂರು-560078 ದೂ.ಸಂ: 080-2566555/ 9945588228 | ನ್ಯಾಷನಲ್ ರೆಸಿಡೆನ್ಷಿಯಲ್ ಸ್ಕೂಲ್ ಫಾರ್ ದಿ ಡೆಫ್ ಬೆಂಗಳೂರು platillem.khwab@gmail.com | ಕಿವುಡು ಮಕ್ಕಳ ಶಾಲೆ | 52 |
| | | 8 | ವಿಜಯನಗರ ಡಿಸೇಬಲ್ಡ್ ಅಸೋಸಿಯೇಷನ್, 9 ನೇ ಮುಖ್ಯ ರಸ್ತೆ, ವಿಶ್ವಕರ್ಮ ದೇವಸ್ಥಾನದ ಹತ್ತಿರ, ಹಂಪಿನಗರ, ವಿಜಯನಗರ 2 ಹಂತ. ಆರ್.ಪಿ.ಸಿ. ಬಡಾವಣೆ, ಬೆಂಗಳೂರು. ದೂ.ಸಂ.23142654/23118866 | ಬುದ್ಧಿವಿಕಲಚೇತನ ಮಕ್ಕಳ ವಸತಿರಹಿತ ಶಾಲೆ vikasaspecialschool1992@gmail.com | ಬುದ್ಧಿಮಾಂದ್ಯ ವಸತಿರಹಿತ | 70 |
| | | 9 | ಹಿಂದೂ ಸೇವಾ ಪ್ರತಿಷ್ಠಾನ, ನಂ.56, 11ನೇ ಮೇನ್, 14ನೇ ಎ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-53 ದೂ.ಸಂ.080-23312908 | ಅರುಣಚೇತನ ಸ್ಕೂಲ್ ಫಾರ್ ದಿ ಸ್ಪಾಸ್ಟಿಕ್ ಮಲ್ಟಿಪಲ್ ಡಿಸೇಬಲ್ಡ್ ವಸತಿರಹಿತ ಶಾಲೆ www.arunachetana.org | ಬುಧಿಮಾಂದ್ಯ ವಸತಿರಹಿತ | 91 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| | | 10 | ಗೆರಿಜಂ ರಿಹ್ಯಾಬಿಲಿಟೇಷನ್ ಟ್ರಸ್ಟ್ (ರಿ), ನಂ. 24, 24 ನೇ ಡಿ ಕ್ರಾಸ್, ಈಜಿಪುರ, ವಿವೇಕನಗರ ಅಂಚೆ, ಬೆಂಗಳೂರು. ದೂ.ಸಂ.080-25712015/25713201 | ಗೇರಿಜಂ ಇಂಟಿಗ್ರೇಟೆಡ್ ಹೋಂ ಅಂಡ್ ಸ್ಕೂಲ್ ಫಾರ್ ದಿ ಹ್ಯಾಂಡಿಕ್ಯಾಪ್ಡ್ gerizim@bgl.vslnet.in | ಬುದ್ಧಿಮಾಂದ್ಯ ವಸತಿಯುತ | 62 |
| | | 11 | ಕರ್ನಾಟಕ ವೆಲ್ಫೇರ್ ಅಸೋಷಿಯೇಷನ್ ಫಾರ್ ದಿ ಬ್ಲೈಂಡ್, ಓರಿಯಂಟೇಷನ್ ಅಂಡ್ ಮೊಬಿಲಿಟಿ ಟ್ರೈನಿಂಗ್ ಸೆಂಟರ್, ನಂ.69, ಸುಬೇದಾರ್ ಛತ್ರಂ ರೋಡ್, ನೆಹರುನಗರ, ಬೆಂಗಳೂರು ದೂ. ಸಂ.23369703/9741122706 | ಕರ್ನಾಟಕ ವೆಲ್ಫೇರ್ ಅಸೋಷಿಯೇಷನ್ ಫಾರ್ ದಿ ಬ್ಲೈಂಡ್ ವಸತಿಯುತ ಶಾಲೆ kwab.ngo@gmail.com | ಅಂಧ ಮಕ್ಕಳು ವಸತಿಯುತ | 89 |
| | | 12 | ಕೃಷ್ಣ ಟ್ರಸ್ಟ್ ರಿ, ಹಳೇಬೈರೂಹಳ್ಳಿ, ಕೆಂಗೇರಿ, ಬೆಂಗಳೂರು ದಕ್ಷಿಣ ತಾ॥, ಬೆಂಗಳೂರು, ಮೊ.ಸಂ:9844045744 | ಕೃಷ್ಣ ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ ಬೆಂಗಳೂರು sadashiv.co@gmail.com | ಬುದ್ಧಿಮಾಂದ್ಯ | 35 |
| | | 13 | ಎಸ್.ಜಿ.ಎಸ್. ವಾಗ್ದೇವಿ ಸಂಪರ್ಕ ನ್ಯೂನತೆಯುಳ್ಳವರ ಪುನಃಶ್ಚೇತನ ಕೇಂದ್ರ, 3ನೇ ಸಿ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಗಿರಿನಗರ, 2ನೇ ಹಂತ, ಬೆಂಗಳೂರು-560085. ದೂ.ಸಂ: 26727141 080-65593266 | ಎಸ್.ಜಿ.ಎಸ್. ವಾಗ್ದೇವಿ ವಾಕ್ ಶ್ರವಣದೋಷವುಳ್ಳ ಮಕ್ಕಳ ವಸತಿರಹಿತ ಶಾಲೆ ಗಿರಿನಗರ ಬೆಂಗಳೂರು www.sgsvagdevi.org | ಕಿವುಡು ಮಕ್ಕಳ ಶಾಲೆ ವಸತಿರಹಿತ | 40 |
| | | 14 | ಸ್ಪಾಸ್ಟಿಕ್ ಸೊಸೈಟಿ ಆಫ್ ಕರ್ನಾಟಕ, ನಂ.31, 5ನೇ ಕ್ರಾಸ್, 5ನೇ ಮೇನ್, 1ನೇ ಹಂತ, ಇಂದಿರಾನಗರ, ಬೆಂಗಳೂರು-38 ದೂ.ಸಂ.40745900/01/02 | ಬುದ್ಧಿಮಾಂದ್ಯ/ಬಹುವಿಧ ವಿಕಲತೆಯುಳ್ಳ ಮಕ್ಕಳ ವಸತಿರಹಿತ ಶಾಲೆ spasticsocietyofkarnataka @gmail.com office@spasticsocietyofka rnataka.org | ಬುದ್ಧಿಮಾಂದ್ಯ | 48 |
| | | 15 | ಸೃಷ್ಟಿ ಸ್ಪೆಷಲ್ ಅಕಾಡೆಮಿ ರಿ, ನಂ.20, ಜಟ್ಟಿಪಾಳ್ಯ, ಚನ್ನೇನಹಳ್ಳಿ, 20ನೇ ಮೈಲಿ, ಮಾಗಡಿ ರಸ್ತೆ, ಬೆಂಗಳೂರು. ದೂ.ಸಂ:23180318/0186-28430504 | ಸೃಷ್ಟಿ ಬುದ್ಧಿಮಾಂದ್ಯ ವಸತಿರಹಿತ ಶಾಲೆ shristiblr@gmail.com | ಬುದ್ಧಿಮಾಂದ್ಯ | 94 |
| | | 16 | ವಿನಾಯಕ ಎಜುಕೇಷನ್, ನಂ.899, 15ನೇ ಅಡ್ಡರಸ್ತೆ, 1ನೇ ಹಂತ, 1ನೇ ಘಟಕ, ಚಂದ್ರಬಡಾವಣೆ, ಬೆಂಗಳೂರು-560040 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ sves2001@gmail.com | ಬುದ್ಧಿಮಾಂದ್ಯ ವಸತಿರಹಿತ | 80 |
| | | 17 | ಆಶಾಚಾರಿಟೇಬಲ್ ಟ್ರಸ್ಟ್, ಬೆಂಗಳೂರು ಎಲ್-76/ಎ, ಹೆಚ್.ಬಿ.ಸಿಎಸ್. ಕಿರ್ಲೋಸ್ಕರ್ ಕಾಲೋನಿ, 3 ನೇ ಕ್ರಾಸ್, 4 ನೇ ಬ್ಲಾಕ್, ಬಸವೇಶ್ವರ ನಗರ, ಬೆಂಗಳೂರು ದೂ.ಸಂ: 080-23225279 | ಆಶಾ ಆಟಿಸಂ ವಸತಿರಹಿತ ಶಾಲೆ www.ashaforautism.com | ಆಟಿಸಂ ವಸತಿರಹಿತ | 59 |
| | | 18 | ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್, ನ. 226/ಎ/3, ಟ್ಯಾಂಕ್ ಬಂಡ್ ರಸ್ತೆ, ಸುಬ್ರಮಣ್ಯನಗರ, ಬೆಂಗಳೂರು. ದೂ.ಸಂ:9900918111, 9980368431 & 080-23471268 | ದೀಪಾ ಅಂಧ ಹೆಣ್ಣು ಮಕ್ಕಳ ವಸತಿಯುತ ಶಾಲೆ deepa.academy@gmail.com | ಅಂಧ ಮಕ್ಕಳು | 28 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| | | 19 | ವೆಲ್ಫೇರ್ ಅಸೋಸಿಯೇಷನ್ ಫಾರ್ ದಿ ರಿಹ್ಯಾಬಿಲಿಟೇಷನ್ ಆಫ್ ಡಿಸೇಬಲ್ಡ್ ಅಂಡ್ ಸೊಸೈಟಿ (ರಿ), ಸಿ.ಎ. ನಿವೇಶನ, ಹಾಪ್‌ಕಾಮ್ಸ್ ಹತ್ತಿರ, 10 ನೇ ಮುಖ್ಯ ರಸ್ತೆ, ಜೀವನಭೀಮಾನಗರ, ಬೆಂಗಳೂರು. ದೂ.ಸಂ.: 080–25260285, 9009571127 | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ info@wardsbengaluru.org | ಬುದ್ಧಿಮಾಂದ್ಯ | 60 |
| | | 20 | ಧರಿತ್ರಿ ಟ್ರಸ್ಟ್ (ರಿ), ಅಜಿತ ಮನೋಚೇತನ ಪೀಣ್ಯ ರೋಟರಿ ಉದ್ಯೋಗಭವನ, # 463 ಡಿ, 13ನೇ ಅಡ್ಡರಸ್ತೆ, ಪೀಣ್ಯ ಕೈಗಾರಿಕಾ ಪ್ರದೇಶ, ಬೆಂಗಳೂರು–560058. | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ info@darithree.org | ಬುದ್ಧಿಮಾಂದ್ಯ ವಸತಿರಹಿತ | 80 |
| | | 21 | ಸಾಯಿಚೈತನ್ಯ ಚಾರಿಟೇಬಲ್ ಟ್ರಸ್ಟ್, ನಂ.27/1, 12ನೇ ಕ್ರಾಸ್, (ಸಿದ್ಧಶ್ರೀ ಧಾಮದ ಹತ್ತಿರ), ರಾಮಗೊಂಡನಹಳ್ಳಿ, ಅನಂತಪುರ, ಯಲಹಂಕ, ಬೆಂಗಳೂರು ನಗರ ದೂ.ಸಂ. 9449637126 | ಬೆಳಕು ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ಬುದ್ಧಿಮಾಂದ್ಯ ವಸತಿರಹಿತ | 98 |
| | | 22 | ಕರ್ನಾಟಕ ವೆಲ್ಫೇರ್ ಅಸೋಸಿಯೇಷನ್ ಫಾರ್ ದಿ ಡೆಫ್ (ರಿ), ನಂ. 171, 4 ನೇ ಡಿ ಮುಖ್ಯ ರಸ್ತೆ, 30 ಅಡಿ ರಸ್ತೆ, ಮಹಾಲಕ್ಷ್ಮಿ ಮುಂದುರೆದ ಬಡಾವಣೆ, ಬೆಂಗಳೂರು. ದೂ.ಸಂ.9902231002 | ಶಾಸ್ತ್ರಿ ಕಿವುಡು ಮಕ್ಕಳ ವಸತಿಯುತ ಶಾಲೆ | ಕಿವುಡು ಮಕ್ಕಳ ವಸತಿಯುತ ಶಾಲೆ | 103 |
| | | 23 | ದಿ ಅಸೋಸಿಯೇಷನ್ ಪೀಪಲ್ ವಿತ್ ಡಿಸೇಬಿಲಿಟಿ, (ಎಪಿಡಿ), 6ನೇ ಅಡ್ಡರಸ್ತೆ, ಹೆಚಿನ್ಸ್ ರೋಡ್. ಹೆಣ್ಣೂರು ಮುಖ್ಯರಸ್ತೆ ಎದುರುಗಡೆ, ಲಿಂಗರಾಜಪುರಂ, ಸೆಂಟ್ ಥಾಮಸ್ ಟೌನ್ ಪೋಸ್ಟ್, ಬೆಂಗಳೂರು–84 | (ಶ್ರದ್ಧಾಂಜಲಿ ಸಮನ್ವಯ ಶಾಲೆ) apdbasavaraj@gmail.com ದೂ.ಸಂ:25415165/ 25489594 9444869430 | ಕಿವುಡು ಮತ್ತು ಮೂಕ ಮಕ್ಕಳ ವಸತಿರಹಿತ ಶಾಲೆ | 20 |
| | | 24 | ಎಫ್.ಎಂ.ಆರ್.ಇಂಡಿಯಾ ಆಶಾನಿಕೇತನ ಸಂಸ್ಥೆ, ಬೆಂಗಳೂರು ಕೋರಮಂಗಲ, ಬೆಂಗಳೂರು | ಬುದ್ಧಿಮಾಂದ್ಯ ವ್ಯಕ್ತಿಗಳ ತರಬೇತಿ ಕೇಂದ್ರ | ಬುದ್ಧಿಮಾಂದ್ಯ ವ್ಯಕ್ತಿಗಳ ತರಬೇತಿ ಕೇಂದ್ರ | 20 |
| | | 25 | ಜ್ಯೋತಿ ಸೇವಾ ಸೊಸೈಟಿ, ಬೆಂಗಳೂರು ಇವರು ವೆಂಕಟೇಶಪುರ, ಬೆಂಗಳೂರು ನಗರ ಜಿಲ್ಲೆ | | ದೃಷ್ಟಿದೋಷ | 66 |
| | | 26 | ಸ್ಪಾಸ್ಟಿಕ್ ಸೊಸೈಟಿ ಆಫ್ ಕರ್ನಾಟಕ, ನಂ.31, 5ನೇ ಕ್ರಾಸ್, 5ನೇ ಮೇನ್, 1ನೇ ಹಂತ, ಇಂದಿರಾನಗರ, ಬೆಂಗಳೂರು–38 ದೂ.ಸಂ.40745900/01/02 | ಬುದ್ಧಿಮಾಂದ್ಯ/ಬಹುವಿಧ ವಿಕಲತೆಯುಳ್ಳ ಮಕ್ಕಳ ವಸತಿರಹಿತ ಶಾಲೆ spasticsocietyofkarnataka @gmail.com office@spasticsocietyofka | ಬುದ್ಧಿಮಾಂದ್ಯ | 48 |
| | | 27 | ನವೋದಯ ಎಜುಕೇಷನ್ ಟ್ರಸ್ಟ್(ರಿ), ನಾಗರಬಾವಿ, ಬೆಂಗಳೂರು | ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತೆರನಾದ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರ | ಬುದ್ಧಿ ಮಾಂದ್ಯ ಮಕ್ಕಳ ಶಾಲೆ | 25 |
| | | 28 | ಆಲ್ಫಾ ಲಿವಿಂಗ್ ಫಾರ್ ಆಟಿಸಂ ಅಡಲ್ಟ್ (ರ), ಬೆಂಗಳೂರು | ಬುದ್ಧಿಮಾಂದ್ಯ, ಸೆರಬ್ರಲ್ ಪಾಲ್ಸಿ, ಆಟಿಸಂ ಹಾಗೂ ತೀವ್ರತೆರನಾದ ಮಕ್ಕಳ ಹಗಲು ಯೋಗಕ್ಷೇಮ ಕೇಂದ್ರ | ಬುದ್ಧಿ ಮಾಂದ್ಯ ಮಕ್ಕಳ ಶಾಲೆ | 25 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| 2 | ಬೆಂಗಳೂರು ಗ್ರಾ | 29 | ಸರ್ವೋದಯ ಸರ್ವೀಸ್ ಸೊಸೈಟಿ ರಿ, ಶಿಡ್ಲಘಟ್ಟ ರಸ್ತೆ, ಚಂದೇನಹಳ್ಳಿ ಗೇಟ್, ವಿಜಯಪುರ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ ಜಿಲ್ಲೆ-563125 ದೂ.ಸಂ: 080-27667047 | ಲೈಫ್ ಲೈಟ್ ಬುದ್ಧಿವಿಕಲಚೇತನ ಮಕ್ಕಳ ವಸತಿಯುತ ಪಾಠಶಾಲೆ, ಶಿಡ್ಲಘಟ್ಟ ರಸ್ತೆ, ಚಂದೇನಹಳ್ಳಿ ಗೇಟ್, ವಿಜಯಪುರ, ದೇವನಹಳ್ಳಿ ತಾ॥, ಬೆಂಗಳೂರು ಗ್ರಾ ಜಿಲ್ಲೆ. | ಬುದ್ಧಿಮಾಂದ್ಯ ವಸತಿಯುತ | 85 |
| | | 30 | ಧರಿತ್ರಿ ಟ್ರಸ್ಟ್ (ರಿ), ನರಸೀಪುರ, ನೆಲಮಂಗಲ ತಾ॥, ಬೆಂಗಳೂರು ಗ್ರಾ ಜಿಲ್ಲೆ (ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ) | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ | ಬುದ್ಧಿಮಾಂದ್ಯ | 50 |
| 3 | ಕೋಲಾರ | 31 | ನಂದಾದೀಪ ಅಂಗವಿಕಲರ ಶಿಕ್ಷಣ ಮತ್ತು ಪುನಃಶ್ಚೇತನ ಸಂಸ್ಥೆ ರಿ, ವೈಟ್ ಗಾರ್ಡನ್, ಅರಳೇರಿ ರಸ್ತೆ, ಮಾಲೂರು-563130, ಕೋಲಾರ ಜಿಲ್ಲೆ ದೂ.ಸಂ: 9448613652 | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಮಾಲೂರು ಕೋಲಾರ ಜಿಲ್ಲೆ apporaoms@gmail.com | ಬುದ್ಧಿಮಾಂದ್ಯ ವಸತಿಯುತ | 71 |
| | | 32 | ಶ್ರೀ ವಾದಿರಾಜ ಟ್ರಸ್ಟ್ (ರಿ), # 994, 1ನೇ ಮುಖ್ಯರಸ್ತೆ, ಕೋಟೆ, ಕೋಲಾರ-563101 | ಶಾರದ ನವಜೀವನ ವಿದ್ಯಾಮಂದಿರ ಬುದ್ದಿವಿಕಲಚೇತನ ಮಕ್ಕಳ ಶಾಲೆ, # 994, 1ನೇ ಮುಖ್ಯರಸ್ತೆ, ಕೋಟೆ, ಕೋಲಾರ-563101 | ಬುದ್ಧಿಮಾಂದ್ಯ ವಸತಿರಹಿತ | 40 |
| | | 33 | ಶ್ರೀ ಶತಶೃಂಗ ವಿದ್ಯಾ ಸಂಸ್ಥೆ ರಿ ಬೆಂಗಳೂರು | ಶ್ರೀ ಸಾಯಿ ಶತಶೃಂಗ ಕಿವುಡು ಮಕ್ಕಳ ವಸತಿಯುತ ಶಾಲೆ ಬಂಗಾರಪೇಟೆ. ಕೋಲಾರ | ಕಿವುಡು ಮಕ್ಕಳ ಶಾಲೆ | 78 |
| | | 34 | ಸಾರ್ಕ್ ಸಂಸ್ಥೆ (ರಿ), ಸರ್ವೀಸ್ ಫಾರ್ ಏಜೆನ್ಸಿ ರೂರಲ್ ವುಮೆನ್ & ಚಿಲ್ಡ್ರನ್, ಕೊತ್ತಮಂಗಲ ರಸ್ತೆ, ಕಾಂತರಾಜವೃತ್ತ, ಕೊತ್ತ ಮಂಗಲ (ಪೋ), ಮುಳಬಾಗಿಲು ತಾ॥, ಕೋಲಾರ ಜಿಲ್ಲೆ, ದೂ.ಸಂ.8722231685 | ಆಶಾಕಿರಣ ಇನ್ಸಿಟ್ಯೂಟ್ ಆಫ್ ಮೆಂಟಲಿ ಹ್ಯಾಂಡಿಕ್ಯಾಪ್ಡ್ ಸ್ಕೂಲ್, ಕೊತ್ತಮಂಗಲ ರಸ್ತೆ, ಕಾಂತರಾಜವೃತ್ತ, ಕೊತ್ತ ಮಂಗಲ (ಪೋ), ಮುಳಬಾಗಿಲು ತಾ॥, ಕೋಲಾರ ಜಿಲ್ಲೆ, ದೂ.ಸಂ.9448664304, 9141557373, 9141643357 e-mail [illegible]@gmail.com | ಬುದ್ಧಿಮಾಂದ್ಯ | 72 |
| 4 | ಶಿವಮೊಗ್ಗ | 35 | ನವಚೇತನ ಬುದ್ಧಿಮಾಂದ್ಯ ಮಕ್ಕಳ ಕ್ಷೇಮಾಭಿವೃದ್ಧಿ ಸಂಸ್ಥೆ, ಕೆ.ಇ.ಬಿ.ಕಾಲೋನಿ, ಸೊರಬ-577439, ಶಿವಮೊಗ್ಗ ಜಿಲ್ಲೆ ಮೊ:ಸಂ: 9449159963/ 948246644 | ನವಚೇತನ ಬುದ್ಧಿಮಾಂದ್ಯ ಮಕ್ಕಳ ವಸತಿ ಯುತ ಶಾಲೆ, ಹೊಸಪೇಟೆ ಹಕ್ಕಲು, ಹಳೇ ಸೊರಬ (ತಾ), ಶಿವಮೊಗ್ಗ ಜಿಲ್ಲೆ-577429 | ಬುದ್ಧಿಮಾಂದ್ಯ | 63 |
| | | 36 | ಶಾಂತಿನಿಕೇತನ ಚಾರಿಟೇಬಲ್ ಟ್ರಸ್ಟ್ ರಿ ಶಿವಮೊಗ್ಗ ದೂ.ಸಂ. 9741338315 | ಮದರ್ ಥೇರಸಾ ಕಿವುಡು ಮತ್ತು ಮೂಕ ಮಕ್ಕಳ ವಸತಿಶಾಲೆ | ಕಿವುಡು ಮಕ್ಕಳ ವಸತಿಶಾಲೆ | 84 |
| 5 | ತುಮಕೂರು | 37 | ಸ್ವದೇಶಿ ಮಹಿಳಾ ಮಂಡಳಿ ರಿ ಮೊಳಕಾಲ್ಮೂರು ಚಿತ್ರದುರ್ಗ | ಜ್ಞಾನಭಾರತಿ ವಾಕ್ ಮತ್ತು ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ ಮಧುಗಿರಿ ತುಮಕೂರು ಜಿಲ್ಲೆ | ಕಿವುಡು ಮಕ್ಕಳ ಶಾಲೆ | 57 |
| | | 38 | ಎಂ.ಜಿ ಎಜುಕೇಷನ್ ಸೊಸೈಟಿ ರಿ ತುಮಕೂರು ಮೊ.ಸಂ.9632557310 | ಸ್ಪಂದನ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ತುಮಕೂರು | ಬುದ್ಧಿಮಾಂದ್ಯ ವಸತಿಯುತ | 69 |
| | | 39 | ಬುದ್ಧಿಮಾಂದ್ಯ ಮಕ್ಕಳ ಪಾಲಕರ ಸಂಘ ರಿ ಕೆಆರ್‌ಜಿ.ಎಂ.ಎಸ್ ತುಮಕೂರು | ಮಾನಸ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ತುಮಕೂರು | ಬುದ್ಧಿಮಾಂದ್ಯ ವಸತಿರಹಿತ | 54 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| 6 | ರಾಮನಗರ | 40 | ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್ ರಿ. ಅರಚಕರಹಳ್ಳಿ, ಬಿ.ಎಂ.ರೋಡ್, ನಾಗಮಂಗಲ ಮಂಡ್ಯ ಜಿಲ್ಲೆ ದೂ.ಸಂ: 27201090, jsbsfb@gmail.com ಮೊ.ಸಂ.9740222169 | ಶ್ರೀ ಬಾಲಗಂಗಾಧರ ನಾಥಸ್ವಾಮಿ ಅಂಧರ ವಸತಿಯುತ ಶಾಲೆ ಅರ್ಚಕರಹಳ್ಳಿ ರಾಮನಗರ | ಅಂಧ ಮಕ್ಕಳು ವಸತಿಯುತ | 194 |
| 7 | ಚಿಕ್ಕಬಳ್ಳಾಪುರ | 41 | ಆಶಾಕಿರಣ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಶಿಡ್ಲಘಟ್ಟ ಚಿಕ್ಕಬಳ್ಳಾಪುರ (ಎಂಆರ್) | ಆಶಾಕಿರಣ ಅಂಧ ಮಕ್ಕಳ ವಸತಿಶಾಲೆ | ಅಂಧ ಮಕ್ಕಳು ವಸತಿಯುತ | 36 |
| | | 42 | ಆಶಾಕಿರಣ ಶಿಕ್ಷಣ ಮತ್ತು ಪುನಶ್ಚೇತನ ಸಂಸ್ಥೆ, ಹೆಲ್ತ ಕಾಲೋನಿ, ಅಂಚೆ ಕಛೇರಿ ರಸ್ತೆ, ಶಿಡ್ಲಘಟ್ಟ ಟೌನ್, ನಲ್ಲಿಮರದಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ ದೂ.ಸಂ: 08158-255600 | ಆಶಾಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಆಣೂರು, ತಿಪ್ಪೇನಹಳ್ಳಿ ಅಂಚೆ, ಶಿಡ್ಲಘಟ್ಟ ತಾ॥, ಚಿಕ್ಕಬಳ್ಳಾಪುರ | ಬುದ್ಧಿಮಾಂದ್ಯ | 35 |
| 8 | ಚಿತ್ರದುರ್ಗ | 43 | ಅಸೋಸಿಯೇಷನ್ ಫಾರ್ ದಿ ಡೆಫ್ ಅಚಿಡ್ ಡಂಬ್(ರಿ), ಕಿವುಡು ಮೂಗರ ಸಂಘಟನೆ ರಿ, ರಾಜೀವ್‌ನಗರ, ನಾಯಕನಹಟ್ಟಿ ರೋಡ್, ಚಳ್ಳಕೆರೆ ತಾ॥, ಚಿತ್ರದುರ್ಗ | ಬೆಳಕು ಕಿವುಡು ಮೂಗರ ಮಕ್ಕಳ ವಸತಿಯುತ ಶಾಲೆ, ರಾಜೀವನಗರ, ನಾಯಕನಹಟ್ಟಿ ರೋಡ್, ಚಳ್ಳಕೆರೆ (ತಾ), ಚಿತ್ರದುರ್ಗ (ಜಿ) | ಕಿವುಡು ಮಕ್ಕಳ ಶಾಲೆ ವಸತಿಯುತ | 68 |
| | | 44 | ಸಿದ್ದೇಶ್ವರ ರೂರಲ್ ಡೆವಲಪ್‌ಮೆಂಟ್ ಸೊಸೈಟಿ (ರಿ), ಹಿರಿಯೂರು ತಾ॥, ಚಿತ್ರದುರ್ಗ ಜಿಲ್ಲೆ | ಸಿದ್ದೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ | 98 |
| 9 | ದಾವಣಗೆರೆ | 45 | ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ ರಿ. # 298/46, ಡಿಸಿಎಂ ಟೌನ್‌ಶಿಫ್, ಪಿ.ಬಿ.ರೋಡ್, ದಾವಣಗೆರೆ ಜಿಲ್ಲೆ ದೂ.ಸಂ: 08192-235819 smdeafschool@rediffmail,com | ಶ್ರೀ ಮೌನೇಶ್ವರಿ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆ, ದಾವಣಗೆರೆ | ಕಿವುಡು ಮಕ್ಕಳ ಶಾಲೆ ಪ್ರಾಥಮಿಕ ಮತ್ತು ಮಾಧ್ಯಮಿಕ | 172 |
| | | 46 | ಶ್ರೀ ವಿನಾಯಕ ಎಜುಕೇಷನ್ ಸೊಸೈಟಿ ರಿ. ದಾವಣಗೆರೆ (ಪ್ರೌಢಶಾಲೆ) | ಶ್ರೀ ಮೌನೇಶ್ವರಿ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ ದಾವಣಗೆರೆ | ಕಿವುಡು ಮಕ್ಕಳ ಪ್ರೌಢಶಾಲೆ | 157 |
| | | 47 | ಅಂಗವಿಕಲರ ಆಶಾಕಿರಣ ಟ್ರಸ್ಟ್ ರಿ, ಲಕ್ಷ್ಮೀ ಫ್ಲೋರ್ ಮಿಲ್ಸ್ ಹಿಂಭಾಗ, ಎಸ್.ಎಸ್.ಲೇಔಟ್, "ಎ" ಬ್ಲಾಕ್, ಶಾಮನೂರ್ ರೋಡ್, ದಾವಣಗೆರೆ-577004 ದೂ.ಸಂ: 08192-222822 ashakiranadvg@gmail.com | ಭಾವೈಕ್ಯತಾ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ದಾವಣಗೆರೆ | ಬುದ್ಧಿಮಾಂದ್ಯ ವಸತಿಯುತ | 178 |
| | | 48 | ಶ್ರೀ ಜಗಜ್ಯೋತಿ ಬಸವೇಶ್ವರ ವಿದ್ಯಾಸಂಸ್ಥೆ (ರಿ), ಹರಿಹರ, ದಾವಣಗೆರೆ | ಶ್ರೀ ಮರುಳ ಸಿದ್ದೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ವಿಶೇಷ ಶಾಲೆ | ಬುದ್ಧಿಮಾಂದ್ಯ | 72 |
| 10 | ಬೆಳಗಾಂ | 49 | ಭಾರತೀಯ ಗ್ರಾಮೀಣ ಶಿಕ್ಷಣ ಪ್ರಸಾರಕ ಸಂಘ ರಿ. ಮನವಳ್ಳಿ, ಸವದತ್ತಿ ತಾ॥, ಬೆಳಗಾವಿ ಜಿಲ್ಲೆ | ಶ್ರೀ ವಿಪಿ ಜವೂರ್ ಸ್ಮಾರಕ ಕಿವುಡ ಮಕ್ಕಳ ಶಾಲೆ ಬೆಳಗಾವಿ | ಶ್ರವಣದೋಷ | 70 |
| | | 50 | ದಿ ಅಪಾಸ್ಟೋಲಿಕ್ ಕಾರ್ಮೆಲ್ ಎಜುಕೇಷನ್ ಸೊಸೈಟಿ (ರಿ), ಸೆಂಟ್ ಆನ್ಸ್ ಕಾನ್ವೆಂಟ್, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ. | ಕಾರ್ಮೆಲ್ ವಿದ್ಯಾವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ ದೇವಲಾಪುರ ಬೈಲಹೊಂಗಲ ಬೆಳಗಾವಿ | ಬುದ್ಧಿಮಾಂದ್ಯ | 49 |
| | | 51 | ಸಹಕಾರ ಶಿಕ್ಷಣ ಮತ್ತು ಸಮಾಜ ಸೇವಾ ಸಂಸ್ಥೆ (ರಿ), ಯಕ್ಸಂಬಾ, ಚಿಕ್ಕೋಡಿ ತಾ॥, ಬೆಳಗಾವಿ | ಆಶಾಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ ಯಕ್ಷಂಬಾ ಬೆಳಗಾವಿ | ಬುದ್ಧಿಮಾಂದ್ಯ | 78 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| | | 52 | ಶ್ರೀ ರೇಣುಕಾ ವಿದ್ಯಾವರ್ಧಕ ಸಂಘ ರಿ, ಸರ್ಕಾರಿ ಆಸ್ಪತ್ರೆ ಹತ್ತಿರ, ಸವದತ್ತಿ, ಬೆಳಗಾವಿ ಜಿಲ್ಲೆ | ಶ್ರೀ ರೇಣುಕ ಕೃಪ ಬುದ್ಧಿ ವಿಕಲಚೇತನ ಮಕ್ಕಳ ವಸತಿಯುತ ಶಾಲೆ ಸವದತ್ತಿ ಬೆಳಗಾವಿ | ಬುದ್ಧಿಮಾಂದ್ಯ | 54 |
| | | 53 | ಅಜಯ್ ವೆಲ್ಫೇರ್ ಅಸೋಸಿಯೇಷನ್ ಫಾರ್ ರಿಹ್ಯಾಬಿಲಿಟೇಷನ್ ಆಫ್ ಡಿಸೇಬಲ್ಡ್, ಜ್ಯೋತಿನಗರ, ಕಂಗ್ರಾಳಿ ಕೆಹೆಚ್, ಬೆಳಗಾವಿ ಜಿಲ್ಲೆ | ಅಜಯ್ ಕಿವುಡು ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ | ಶ್ರವಣದೋಷ | 41 |
| | | 54 | ದೂದನಾನ ವಿಕಾಸ ಶಿಕ್ಷಣ ಸಂಸ್ಥೆ ರಿ, ಹಿಡಗಲ್ ಅಣೇಕಟ್ಟು, ಹುಕ್ಕೇರಿ ತಾ॥, ಬೆಳಗಾವಿ ಜಿಲ್ಲೆ | ಬುದ್ಧಿವಿಕಲಚೇತನ ಮಕ್ಕಳ ವಸತಿಯುತ ಶಾಲೆ ಬೆಳಗಾವಿ | ಬುದ್ಧಿಮಾಂದ್ಯ | 49 |
| | | 55 | ಬೆಳಗಾವಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ನಾಗನೂರ, ಗೋಕಾಕ್, ಬೆಳಗಾವಿ ಜಿಲ್ಲೆ | ಬರ್ಡ್ಸ್ ಕಿವುಡ ಮಕ್ಕಳ ವಸತಿಯುತ ಶಾಲೆ, ಎ.ಪಿ.ಎಂ.ಸಿ.ಆವರಣ, | ಶ್ರವಣದೋಷ | 60 |
| | | 56 | ಮಾವುಲಿ ಗ್ರಾಮೀಣ ವಿಕಾಸ ಅಪಂಗ ಪನರ್ವಸನ ಕೇಂದ್ರ ನಿಪ್ಪಾಣಿ, ಚಿಕ್ಕೋಡಿ, ಬೆಳಗಾವಿ | ನಿತಿನ್ ಕುಮಾರ್ ಕದಮ ಕಿವುಡು ಮಕ್ಕಳ ಶಾಲೆ | ಶ್ರವಣದೋಷ | 57 |
| | | 57 | ಶ್ರೀ ಜೀಜಾಮಾತಾ ವಿಶ್ವ ಚೇತನಾಭಿವೃದ್ಧಿ ಸಂಸ್ಥೆ ರಿ. ಶಿವಯೋಗಿನಗರ, ಸಚಿನ್ ಪೆಟ್ರೋಲ್ ಬಂಕ್ ಎದುರಿಗೆ, ಕರಿಮಸೂತಿ ಹತ್ತಿರ, ವಿಜಯಪುರಸ್ತೆ, ಅಥಣಿ, ಬೆಳಗಾವಿ ಜಿಲ್ಲೆ | ಶ್ರೀ ಶಾರದಾದೇವಿ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ | ಬುದ್ಧಿಮಾಂದ್ಯ | 65 |
| 11 | ಬಿಜಾಪುರ | 58 | ಶ್ರೀ ಶಿವಶಂಕರ ವಿದ್ಯಾವರ್ಧಕ ಕೇಂದ್ರ ರಿ. ಝಳಕಿ ಇಂಡಿ ತಾಲ್ಲೂಕು, ವಿಜಯಪುರ ಜಿಲ್ಲೆ | ಶ್ರೀ ಗುರುಚಂದ್ರಶೇಖರ ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ ಝಳಕಿ ಇಂಡಿ ತಾಲ್ಲೂಕು ವಿಜಯಪುರ | ಶ್ರವಣದೋಷ | 86 |
| | | 59 | ಪರಮಾನಂದ ಜನಸೇವಾ ಶಿಕ್ಷಣ ಸಮಿತಿ ರಿ ಮುಳಸಾವಳಗಿ, ಸಿಂಧಗಿ ತಾ. ವಿಜಯಪುರ | ಎಂ.ಎಸ್.ಬಿ ಕಿವುಡ ಮೂಕ ಮಕ್ಕಳ ವಸತಿಯುತ ಶಾಲೆ ಗೋಲಗೇರಿ ಸಿಂಧಗಿ ಗಾ ವಿಜಯಪುರ | ಶ್ರವಣದೋಷ | 106 |
| 12 | ಬಾಗಲಕೋಟೆ | 60 | ಶ್ರೀ ಮುಗುಗೇಂದ್ರ ಶಿವಾಚಾರ್ಯ ಮಹಾಸ್ವಾಮಿ ವಿದ್ಯಾಸಂಸ್ಥೆ(ರಿ), ದಿಂಡವಾರ, ಬಸವನಬಾಗೇವಾಡಿ ತಾ. ವಿಜಯಪುರ ಜಿಲ್ಲೆ. | ದಿಂಡಿವಾರ ಶ್ರೀ ಮುರುಗೇಂದ್ರ ಶಿವಾಚಾರ್ಯ ಶ್ರವಣದೋಷವುಳ್ಳ ಮಕ್ಕಳ ವಸತಿಯುತ ಶಾಲೆ ಬಾಗಲಕೋಟೆ | ಶ್ರವಣದೋಷ | 80 |
| | | 61 | ಶ್ರೀ ಯಲಗೂರೇಶ್ವರ ವಿದ್ಯಾವರ್ಧಕ ಸಂಘ ರಿ ಲಕ್ಷ್ಮೀನಗರ, ಅಮೀನ್‌ಗಢ, ಬಾಗಲಕೋಟೆ | ಯಲಗೂರೇಶ್ವರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 70 |
| | | 62 | ಸಮಗ್ರ ಜೀವನ ವಿಕಾಸ ಸಂಸ್ಥೆ ರಿ, ಮುಧೋಳ, ವಾರ್ಡ್ ನಂ.-2, ಹೌಸ್ ನಂ:537/ಬಿ ಮುಧೋಳ ಬಾಗಲಕೋಟೆ ಜಿಲ್ಲೆ | ಸಜೀವಿ ಅಂಧ ಮಕ್ಕಳ ವಸತಿಯುತ ಶಾಲೆ ಮುಧೋಳ್ ಬಾಗಲಕೋಟೆ | ಅಂಧ ಮಕ್ಕಳು | 98 |
| | | 63 | ಸರ್ವೋದಯ ಮಹಿಳಾ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ರಿ ಜಮಖಂಡಿ ಬಾಗಲಕೋಟೆ | ಸರ್ವೋದಯ ಕಿವುಡು ಮಕ್ಕಳ ವಸತಿಯುತ ಶಾಲೆ | ಶ್ರವಣದೋಷ | 110 |
| | | 64 | ಶ್ರೀ ಶಿವ ಶಿಕ್ಷಣ ಸಂಸ್ಥೆ, ಕುಳಲಿ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 63 |
| | | 65 | ಕನಕದಾಸ ಗ್ರಾಮೀಣಾಭಿವೃದ್ಧಿ ಸಂಸ್ಥೆ (ರಿ), ಬೀಳಗಿ ತಾ॥, ಬಾಗಲಕೋಟೆ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 77 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| 13 | ಧಾರವಾಡ | 66 | ಶ್ರೀ ಆರೋಢ ಅಂಗವಿಕಲರ ಶಿಕ್ಷಣ ಸಂಸ್ಥೆ (ರಿ), ನಂ.17, 2ನೇ ಕ್ರಾಸ್, ಮಗಜಿಕೊಂಡಿ ಲೇಔಟ್, ಸಿದ್ಧಾರೂಡ ಮಠ ಮುಖ್ಯರಸ್ತೆ, ಹಳೇಹುಬ್ಬಳ್ಳಿ, | ಅಂಧ ಮಕ್ಕಳ ವಸತಿಯುತ ಶಾಲೆ | ದೃಷ್ಟಿದೋಷ | 92 |
| | | 67 | ಪ್ರಿಯದರ್ಶಿನಿ ಜನಸೇವಾ ಸಾಗರ ರಿ ಗುರುನಾಥ ನಗರ ಹಳೇ ಹುಬ್ಬಳ್ಳಿ ಧಾರವಾಡ ಜಿಲ್ಲೆ | ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ | ಶ್ರವಣದೋಷ | 141 |
| | | 68 | ವಿಶ್ವಧರ್ಮ ಮಹಿಳಾ ಮತ್ತು ಮಕ್ಕಳ ಶಿಕ್ಷಣ ಸೇವಾಶ್ರಮ ಸಮಿತಿ ರಿ, ವೀರಾಪುರ ಓಣಿ, ಹಕ್ಕಲ, ಹುಬ್ಬಳ್ಳಿ, ಧಾರವಾಡ ಜಿಲ್ಲೆ | ವಿಶ್ವಧರ್ಮ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 131 |
| | | 69 | ಮನೋವಿಕಾಸ ಇನ್ಸ್‌ಟಿಟ್ಯೂಟ್ ರಿಹ್ಯಾಬಿಲಿಟೇಷನ್ ಸರ್ವಿಸ್ ದೇವಾಂಗ ಬೀದಿ ಹುಬ್ಬಳ್ಳಿ ಧಾರವಾಡ | ಮನೋವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 84 |
| | | 70 | ಹೊನ್ನಮ್ಮ ಶಿಕ್ಷಣ ಸಂಸ್ಥೆ ರಿ ಧಾರವಾಡ ಜಿಲ್ಲೆ | ಕಿವುಡ ಮಕ್ಕಳ ಪ್ರಾಥಮಿಕ ಹಾಗೂ ಪ್ರೌಢಶಾಲೆ ಧಾರವಾಡ | ಶ್ರವಣದೋಷ | 90 |
| 14 | ಗದಗ | 71 | ಮಂಜು ಶಿಕ್ಷಣ ಸಂಸ್ಥೆ ರಿ, ಬಾಲಾಜಿ ರಸ್ತೆ, ಬೆಟಗೇರಿ, ಗದಗ ಜಿಲ್ಲೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 61 |
| | | 72 | ಶ್ರೀ ವೆಂಕಟೇಶ್ವರ ಗ್ರಾಮಾಂತರ ಹಿಂದಿ ಪ್ರಚಾರಕ ಸಮಿತಿ ರಿ ಗದಗ | ಸ್ಪಂದನ ಕಿವುಡ ಮಕ್ಕಳ ವಸತಿರಹಿತ ಶಾಲೆ ಗದಗ | ಶ್ರವಣದೋಷ | 44 |
| | | 73 | ಶ್ರೀ ಅನ್ನದಾನ ವಿಜಯ ವಿದ್ಯಾಪ್ರಸಾರಕ ಸಮಿತಿ ನರೇಗಲ್ಲ | ಕಿವುಡು ಮಕ್ಕಳ ವಸತಿಯುತ ಶಾಲೆ ರೋಣ ನರೇಗಲ್ | ಶ್ರವಣದೋಷ | 90 |
| | | 74 | ಶ್ರೀ ಬಿ.ಡಿ ತಟ್ಟಿ (ಅಣ್ಣವರ) ಮೆಮೊರಿಯಲ್ ಚಾರಿಟಬಲ್ ಟ್ರಸ್ಟ್ ರಿ ಲಕ್ಷ್ಮೇಶ್ವರ ಗದಗ | ಬಿ.ಡಿ ತಟ್ಟಿ ಕಿವುಡ ಮಕ್ಕಳ ವಸತಿಯುತ ಶಾಲೆ ಲಕ್ಷ್ಮೇಶ್ವರ ಗದಗ | ಶ್ರವಣದೋಷ | 162 |
| | | 75 | ಯೋಗೀಶ್ವರ ವಿವಿದೋದ್ದೇಶ ಸಂಸ್ಥೆ (ರಿ), ಹೊಳೆ ಆಲೂರು, ರೋಣ ತಾ॥, ಗದಗ ಜಿಲ್ಲೆ | ಜ್ಞಾನಸಿಂಧು ಅಂಧ ಮಕ್ಕಳ ವಸತಿಯತ ಶಾಲೆ, | ದೃಷ್ಟಿದೋಷ | 64 |
| 15 | ಹಾವೇರಿ | 76 | ದಿವ್ಯಜ್ಯೋತಿ ವಿದ್ಯಾ ಸಂಸ್ಥೆ ರಿ, ಇಂಡಸ್ಟ್ರಿಯಲ್ ಏರಿಯಾ, ಇಜಾರಿ ಲಕ್ಮಾಪುರ, ಪಿ.ಬಿ.ರಸ್ತೆ, ಹಾವೇರಿ ಜಿಲ್ಲೆ | ಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ ಹಾವೇರಿ | ಬುದ್ಧಿಮಾಂದ್ಯ | 133 |
| | | 77 | ಸೇವಾ ಟ್ರಸ್ಟ್ ಫಾರ್ ದಿ ಬ್ಲೈಂಡ್ ರಿ. ರಾಣೆ ಬೆನ್ನೂರು, ಹಾವೇರಿ ಜಿಲ್ಲೆ | ಶ್ರೀ ರೇಣುಕ ಎಲ್ಲಮ್ಮ ಕಿವುಡು ಮಕ್ಕಳ ಶಾಲೆ | ಶ್ರವಣದೋಷ | 145 |
| | | 78 | ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ತರಬೇತಿ ಮತ್ತು ಪುನರ್ವಸತಿ ಸಂಘ ರಿ, ರೈಲ್ವೆ ಸ್ಟೇಷನ್ ರಸ್ತೆ, ರೋಟರಿ ಶಾಲೆ ಹತ್ತಿರ, ರಾಣೆಬೆನ್ನೂರು, ಹಾವೇರಿ ಜಿಲ್ಲೆ | ಚೈತನ್ಯ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 70 |
| | | 79 | ಜ್ಞಾನ ಪ್ರಜ್ಞಾ ಶಿಕ್ಷಣ ಸಂಸ್ಥೆ ರಿ, ಮುಂಡಗೋಡ ಜಿಲ್ಲೆ, ಕಾರವಾರ | ಜ್ಞಾನಜ್ಯೋತಿ ಅಂಧ ಮಕ್ಕಳ ವಸತಿಯುತ ಶಾಲೆ, ಹಾವೇರಿ | ದೃಷ್ಟಿದೋಷ | 76 |
| | | 80 | ಶ್ರೀ ಚನ್ನಬಸವೇಶ್ವರ ಗ್ರಾಮೀಣ ವಿದ್ಯಾಸಂಸ್ಥೆ(ರಿ) ಶಿಗ್ಗಾಂವಿ ಹಾವೇರಿ | ಗಾನಯೋಗಿ ಪಂಡಿತ ಪಂಚಾಕ್ಷರಿ ಗವಾಯಿರವರ ಕಿವುಡ ಮಕ್ಕಳ ವಸತಿ ಶಾಲೆ | ಶ್ರವಣದೋಷ | 75 |
| | | 81 | ಶ್ರೀ ಮಾರುತಿ ವಿದ್ಯಾಸಂಸ್ಥೆ ರಿ, ಸೋಮನಹಳ್ಳಿ, ಹಿರೇಕೆರೂರು ತಾ॥, ಹಾವೇರಿ ಜಿಲ್ಲೆ | ಶ್ರೀ ಜ್ಞಾನಕಿರಣ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ, ಕುಮಾರ ಪಟ್ಟಣ, ಕೊಡಿಯಾಲ ಅಂಚೆ, ರಾಣೆಬೆನ್ನೂರು ಹಾವೇರಿ ಜಿಲ್ಲೆ | ಬುದ್ಧಿಮಾಂದ್ಯ | 98 |
| | | 82 | ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿದ್ಯಾ ಸಂಸ್ಥೆ (ರಿ), ಶಿಕ್ಷಕರ ಸಂಘದ ಹತ್ತಿರ, ಚರ್ಚ್ ರಸ್ತೆ, ರಾಣೆ ಬೆನ್ನೂರು, ಹಾವೇರಿ ಜಿಲೆ. ದೂ.ಸಂ.9844809975 | ವಿದ್ಯಾಚೇತನ ಬುದ್ಧಿಮಾಂದ್ಯ ಶಾಲೆ, ಅಂಗರ ಹಟ್ಟಿ, ಬ್ಯಾಡಗಿ ತಾ॥, ಹಾವೇರಿ ಜಿಲ್ಲೆ | ಬುದ್ಧಿಮಾಂದ್ಯ | 91 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| | | 83 | ಸಿದ್ಧಿವಿನಾಯಕ ಎಜುಕೇಷನ್ ಟ್ರಸ್ಟ್, ಹಾವೇರಿ | ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ಬುದ್ಧಿಮಾಂದ್ಯ | 42 |
| | | 84 | ವಿನೋದ ವಿದ್ಯಾಸಂಸ್ಥೆ | ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 28 |
| 16 | ಕಾರವಾರ | 85 | ಜ್ಞಾನಪ್ರಜ್ಞ ವಿದ್ಯಾಸಂಸ್ಥೆ ರಿ. ದೇಶಪಾಂಡೆ ನಗರ, ಮುಂಡಗೋಡ, ಕಾರವಾರ | ಜ್ಞಾನಪ್ರಜ್ಞಾ ಅಂಧ ಮಕ್ಕಳ ವಸತಿಯುತ ಶಾಲೆ ದೇಶಪಾಂಡೆ ನಗರ ಮುಂಡಗೋಡ ಕಾರವಾರ | ದೃಷ್ಟಿದೋಷ | 65 |
| | | 86 | ಕಾರವಾರ ಡಾಯೋಸಿಸನ್ ಡೆವಲಪ್‌ಮೆಂಟ್ ಕೌನ್ಸಿಲ್, (ಕೆ.ಡಿ.ಡಿ.ಸಿ.) (ರಿ). ಬಿಷಪ್ ನಿವಾಸ, ಕಾರವಾರ-581302 | ಆಶಾ ನಿಕೇತನ ಕಿವುಡ ಮಕ್ಕಳ ವಸತಿಯುತ ಶಾಲೆ, ಬುಕ್ ಬೈಂಡರ್ ರಸ್ತೆ, ಕಾಜುಭಾಗ, ಕಾರವಾರ | ಶ್ರವಣದೋಷ | 53 |
| | | 87 | ಬಾಪೂಜಿ ಗ್ರಾಮೀಣ ವಿಕಾಸ ಸಮಿತಿ ರಿ ಸಿದ್ಧರ ಕಾರವಾರ | ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ | ಶ್ರವಣದೋಷ | 26 |
| | | 88 | ಉತ್ತರ ಕನ್ನಡ ಜಿಲ್ಲೆ ಅಂಗವಿಕಲರ ಕ್ಷೇಮಾಭಿವೃದ್ಧಿ ಸಂಸ್ಥೆ ರಿ. ಬನವಾಸಿ ರಸ್ತೆ ಸಿರಸಿ ಉತ್ತರಕನ್ನಡ ಜಿಲ್ಲೆ | ಕಿವುಡ ಮತ್ತು ಮೂಕ ಮಕ್ಕಳ ವಸತಿಯುತ ಶಾಲೆ | ಶ್ರವಣದೋಷ | 53 |
| | | 89 | ಅಜಿತ ಮನೋಚೇತನಾ ಟ್ರಸ್ಟ್ ರಿ ಮರಾಠಿಕೊಪ್ಪ ಶಿರಸಿ ಉತ್ತರ ಕನ್ನಡ | ವಿಕಾಸ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ಬುದ್ಧಿಮಾಂದ್ಯ | 38 |
| | | 90 | ಶ್ರೀ ಮಲ್ಲಿಕಾರ್ಜುನ ಜನಸೇವಾ ಸಂಸ್ಥೆ, ಬೆಳಗಾವಿ | ಶ್ರೀ ರಾಘವೇಂದ್ರ ಬುದ್ಧಿಮಾಂದ್ಯ ಮಕ್ಕಳ ವಸತಿಯುತ ಶಾಲೆ | ಬುದ್ಧಿಮಾಂದ್ಯ | 65 |
| | | 91 | ಆಶಾಕಿರಣ ಟ್ರಸ್ಟ್, ಹಾಳದಕಟ್ಟಾ, ಸಿದ್ಧಾಪುರ, ಕಾರವಾರ | ಶ್ರೀ ಜಗದ್ಗುರು ಮುರುಗರಾಜೇಂದ್ರ ಅಂಧ ಮಕ್ಕಳ ವಸತಿ ಶಾಲೆ | ದೃಷ್ಟಿದೋಷ | 38 |
| 17 | ಚಿಕ್ಕಮಗಳೂರು | 92 | ಶ್ರೀ ನಿವೇದಿತಾ ವಿದ್ಯಾಸಂಸ್ಥೆ ಬಿಕ್ಕೋಡು ಬೇಲೂರು ತಾ. ಹಾಸನ ಜಿಲ್ಲೆ ಮೊ.ಸಂ.9742627256 | ನಿವೇದಿತಾ ವಿದ್ಯಾ ಶ್ರವಣದೋಷವುಳ್ಳ ಮಕ್ಕಳ ವಸತಿ ಶಾಲೆ ಕಡೂರು ಚಿಕ್ಕಮಗಳೂರು | ಶ್ರವಣದೋಷ | 71 |
| | | 93 | ಶ್ರೀ ನಿವೇದಿತಾ ವಿದ್ಯಾಸಂಸ್ಥೆ (ರಿ). ಬಿಕ್ಕೋಡು ಬೇಲೂರು ತಾ. ಹಾಸನ ಜಿಲ್ಲೆ ಮೊ.ಸಂ.9742627256 | ನಿವೇದಿತಾ ವಿದ್ಯಾ ಬುದ್ಧಿಮಾಂದ್ಯ ಮಕ್ಕಳ ವಸತಿಶಾಲೆ, ಜಿ.ಸೂರ್ಯನಾರಾಯಣ ಮತ್ತು ವಸಂತಕುಮಾರಿ, ಕಟ್ಟಡ, 2ನೇ ಕ್ರಾಸ್, ಕಡೂರು, ಚಿಕ್ಕಮಗಳೂರು ಜಿಲ್ಲೆ ಕಡೂರು ಚಿಕ್ಕಮಗಳೂರು | ಬುದ್ಧಿಮಾಂದ್ಯ | 85 |
| 18 | ದಕ್ಷಿಣ ಕನ್ನಡ | 94 | ಆರ್ಸುಲೈನ್ ಫ್ರಾನ್ಸಿಸ್ಕನ್ ಎಜುಕೇಷನ್ ಸೊಸೈಟಿ ದಕ್ಷಿಣ ಕನ್ನಡ ಜಿಲ್ಲೆ (ಬುದ್ಧಿಮಾಂದ್ಯ) | ಕ್ರಿಸ್ತರಾಜ ನವಚೇತನ ವಿಶೇಷ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ವೇಣೂರು ಬೆಳ್ತಂಗಡಿ ದಕ್ಷಿಣ ಕನ್ನಡ ಜಿಲ್ಲೆ | ಬುದ್ಧಿಮಾಂದ್ಯ | 36 |
| | | 95 | ಲಯನ್ಸ್ ಸೇವಾ ಟ್ರಸ್ಟ್ ರಿ ಸುರತ್ಕಲ್ ಮಂಗಳೂರು | ಲಯನ್ಸ್ ಬುದ್ಧಿಮಾಂದ್ಯರ ವಸತಿರಹಿತ ಶಾಲೆ, ಮಂಗಳೂರು | ಬುದ್ಧಿಮಾಂದ್ಯ | 63 |
| | | 96 | ಗಣೇಶ ಸೇವಾ ಟ್ರಸ್ಟ್ ಫಾರ್ ಎಕ್ಸೆಪ್ಷನಲ್ ಪರ್ಸನ್ಸ್ ರಿ, ಶಕ್ತಿನಗರ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ (ಬುದ್ಧಿಮಾಂದ್ಯ) | ಸಾನಿಧ್ಯ ಮಾನಸಿಕ ಭಿನ್ನ ಸಾಮರ್ಥ್ಯ ಮಕ್ಕಳ ವಸತಿಯುತ ಶಾಲೆ, ಮಂಗಳೂರು | ಬುದ್ಧಿಮಾಂದ್ಯ | 112 |

| ಕ್ರ | ಜಿಲ್ಲೆಯ ಹೆಸರು | ಕ್ರ ಸಂ | ಸಂಸ್ಥೆಯ ಹೆಸರು | ಶಾಲೆಯ ಹೆಸರು | ಅಂಗವಿಕಲತೆಯ ವಿಧ | ಮಕ್ಕಳ ಸಂಖ್ಯೆ |
|---|---|---|---|---|---|---|
| | | 97 | ಜೀವನ್ ಜ್ಯೋತಿ ಚಾರಿಟೇಬಲ್ ಟ್ರಸ್ಟ್ ರಿ ಕಿನ್ನಿಗೋಳಿ, ಮಂಗಳೂರು | ಸೆಂಟ್‌ಮೇರಿಸ್ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ | ಬುದ್ಧಿಮಾಂದ್ಯ | 36 |
| | | 98 | ಎಂ.ಬಿ.ಫೌಂಡೇಷನ್ (ರಿ), ಕೃಷ್ಣ ಬಿಲ್ಡಿಂಗ್, ಸುಳ್ಯ ತಾ॥, ಸುಳ್ಯ ಪೋಸ್ಟ್, ದಕ್ಷಿಣ ಕನ್ನಡ ಜಿಲ್ಲೆ–574237 ದೂ.ಸಂ.9448141339 /9972951559 | ಸಾಂದೀಪ ವಿಕಲಚೇತನ ಮಕ್ಕಳ ವಿಶೇಷ ಶಾಲೆ, ಮೊಳಹಳ್ಳಿ, ಶಿವರಾವ್ ರಸ್ತೆ, ಸುಳ್ಯ ಅಂಚೆ, ಸುಳ್ಯ ತಾ॥ | ಬುದ್ಧಿಮಾಂದ್ಯ | 33 |
| | | 99 | ಸೇವಾ ಭಾರತಿ ಟ್ರಸ್ಟ್ (ರಿ), ಬಾಲಮಾರುತಿ ವ್ಯಾಯಾಮ ಮಂಡಳಿ, ವಿ.ಟಿ.ರಸ್ತೆ, ಮಂಗಳೂರು ಮೊ.ಸಂ.9880543918 | ಚೇತನಾ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ, ಮಂಗಳೂರು | ಬುದ್ಧಿಮಾಂದ್ಯ | 35 |
| | | 100 | ಸೇವಾಭಾರತಿ ಟ್ರಸ್ಟ್ (ರಿ), ಬಾಲಮಾರುತಿ ವ್ಯಾಯಾಮ ಮಂಡಳಿ, ವಿ.ಟಿ.ರಸ್ತೆ, ಮಂಗಳೂರು ಮೊ.ಸಂ.9880543918 | ಕ್ಯಾಥರಿನ್ ಲೋಬೋ ಅಂಧ ಮಕ್ಕಳ ಶಾಲೆ, ಮಂಗಳೂರು | ದೃಷ್ಟಿದೋಷ | 26 |
| | | 101 | ಬೆಥನಿ ಧರ್ಮಸೇನಾ ಸಂಘ, ನೆಲ್ಯಾಡಿ, ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ | ಬೆಥನಿ ಜೀವನಜ್ಯೋತಿ ಬುದ್ಧಿಮಾಂದ್ಯ ಮಕ್ಕಳ ಶಾಲೆ | ಬುದ್ಧಿಮಾಂದ್ಯ | 35 |
| 19 | ಹಾಸನ | 102 | ವಿದ್ಯಾರಣ್ಯ ರಿ ಮಂಡೂರು ಬೆಂಗಳೂರು ಪೂರ್ವ ತಾಲ್ಲೂಕು | ಅವಕಾಶ ಬುದ್ಧಿವಿಕಲಚೇತನ ಮಕ್ಕಳ ಶಾಲೆ ಚನ್ನರಾಯಪಟ್ಟಣ ಹಾಸನ | ಬುದ್ಧಿಮಾಂದ್ಯ | 52 |
| | | 103 | ರೋಟರಿ ಟ್ರಸ್ಟ್, ಎನ್.ಕೆ.ಗಣಪಯ್ಯ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಕೌಡಳ್ಳಿ, ಆನೇಮಹಲ್ ಅಂಚೆ, ಸಕಲೇಶಪುರ ತಾ॥, ಹಾಸನ ಜಿಲ್ಲೆ | ಎನ್.ಕೆ.ಗಣಪಯ್ಯ ರೋಟರಿ ಶ್ರವಣದೋಷವುಳ್ಳ ಮಕ್ಕಳ ಶಾಲೆ. | ಶ್ರವಣದೋಷ | 80 |
| | | 104 | ಕರ್ನಾಟಕ ಹ್ಯಾಂಡಿಕ್ಯಾಪ್ಡ್ ವೆಲ್ಫೇರ್ ಅಸೋಸಿಯೇಷನ್, ನಂ.06, (ಸಿ.ಎ.) ಬಸ್ ಸ್ಟ್ಯಾಂಡ್ ಎದುರು, ಜೀವನ್ ಭೀಮಾನಗರ, ಬೆಂಗಳೂರು–560075 | ಜೀವನ ಜ್ಯೋತಿ ಕಿವುಡು ಮಕ್ಕಳ ವಿಶೇಷ ವಸತಿಯುತ ಶಾಲೆ | ಶ್ರವಣದೋಷ | 50 |
| | | 105 | ಸಾಧ್ಯ ಟ್ರಸ್ಟ್ ಫಾರ್ ಸೋಷಿಯಲ್ ಡೆವಲಪ್‌ಮೆಂಟ್ (ರಿ) ಮಡಿಕೇರಿ | ಸಾಧ್ಯ ಬುದ್ಧಿಮಾಂದ್ಯ ಮಕ್ಕಳ ವಸತಿ ಶಾಲೆ, ಕೆ ಆರ್ ಪುರಂ, ಹಾಸನ ಜಿಲ್ಲೆ | ಬುದ್ಧಿಮಾಂದ್ಯ | 32 |
| 20 | ಕೊಡಗು | 106 | ಚೆಶೈರ್ ಹೋಮ್, ಕೊಡಗು | ಬುದ್ಧಿಮಾಂದ್ಯ ಮಕ್ಕಳ ಶಾಲೆ | ಬುದ್ಧಿಮಾಂದ್ಯ | 42 |
| | | 107 | ಕೊಡಗು ವಿದ್ಯಾಲಯ, ಸಿದ್ದಾಪುರ ರಸ್ತೆ, ಕೊಡಗು, ಮಡಿಕೇರಿಜಿಲ್ಲೆ, | ಆಪರ್ಚುನಿಟಿ ಬುದ್ಧಿಮಾಂದ್ಯ ಮಕ್ಕಳ ವಸತಿರಹಿತ ಶಾಲೆ ಮಡಿಕೇರಿ | ಬುದ್ಧಿಮಾಂದ್ಯ | 35 |
| 21 | ಮೈಸೂರು | 108 | ಸಾಯಿರಂಗ ವಿದ್ಯಾಸಂಸ್ಥೆ ಕಿವುಡು ಗಂಡು ಮಕ್ಕಳ ವಸತಿ ಪಾಠಶಾಲೆ #764/ಎ. ಬಿ ಬಡಾವಣೆ ಬನ್ನಿಮಂಟಪ ಮೈಸೂರು | ಸಾಯಿರಂಗ ಕಿವುಡು ಗಂಡು ಮಕ್ಕಳ ವಸತಿಯುತ ಶಾಲೆ, ಮೈಸೂರು | ಶ್ರವಣದೋಷ | 119 |
| | | 109 | ಡಾಟರ್ಸ್ ಆಫ್ ಅವರ್ ಲೇಡಿ ಮರ್ಸಿ ಕಿವುಡು ಹೆಣ್ಣು ಮಕ್ಕಳ ವಸತಿ ಪಾಠಶಾಲೆ, ಓಲ್ಡ್ ಹೆಚ್.ಡಿ.ಕೋಟೆ ರಸ್ತೆ, ಶ್ರೀರಾಂಪುರ ಮೈಸೂರು | ಮರ್ಸಿ ಶ್ರವಣದೋಷವುಳ್ಳ ಮಕ್ಕಳ ಶಾಲೆ, ಮೈಸೂರು | ಶ್ರವಣದೋಷ | 129 |
| | | 110 | ರಂಗರಾವ್ ಸ್ಮಾರಕ ಅಂಗವಿಕಲರ ಶಾಲೆ – ಅಂಧ ಹೆಣ್ಣು ಮಕ್ಕಳ ವಸತಿ ಶಾಲೆ #1/ಸಿ, ಕೆ.ಆರ್.ಎಸ್ ರಸ್ತೆ ಮೇಟಗಳ್ಳಿ ಮೈಸೂರು | ರಂಗರಾವ್ ಸ್ಮಾರಕ ಅಂಧ ಹೆಣ್ಣು ಮಕ್ಕಳ ವಸತಿಶಾಲೆ, ಮೈಸೂರು | ದೃಷ್ಟಿದೋಷ | 88 |